ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಮಾರ್ಚ್ ೩ನೇ ವಾರ**

16-03-2026 TO 21-03-2026



## ಜಯಂತಿ ಕುಮರೇಶ್‌ಗೆ 'ಸಂಗೀತ ಕಲಾನಿಧಿ' ಪ್ರಶಸ್ತಿ

- ಹೊರ್ಮುಜ್ ನಿಯಂತ್ರಿಸಲು ಒಕ್ಕೂಟ'
- 'ದಿವ್ಯಾಂಗ ಶಕ್ತಿ' ಯೋಜನೆ
- ಐ.ಟಿ ಕಾಯ್ದೆ
- ಒಡಿಶಾದಲ್ಲಿ 2028ರ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

### ರಾಜ್ಯದಲ್ಲಿ ಯೋಜನೆ ಜಾರಿಗೆ ಕಳೆದ ವರ್ಷವೇ ಆದೇಶವಾದರೂ ಅನುಷ್ಠಾನವಿಲ್ಲ

# 'ವಯೋ ವಂದನಾ'ದಡಿ ವೃದ್ಧರಿಗಿಲ್ಲ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ 'ಆಯುಷ್ಮಾನ್ ವಯೋ ವಂದನಾ' ಯೋಜನೆ ಜಾರಿಗೆ ಸಂಬಂಧಿಸಿದಂತೆ ಕಳೆದ ವರ್ಷವೇ ಆದೇಶ ಹೊರಡಿಸಲಾಗಿದ್ದರೂ ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ಯೋಜನೆಯಡಿ ಕಾರ್ಡ್ ಪಡೆದಿರುವ 70 ವರ್ಷ ಮೇಲ್ಪಟ್ಟ ಫಲಾನುಭವಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಟ ನಡೆಸುತ್ತಿದ್ದಾರೆ.

ಕೇಂದ್ರ ಸರ್ಕಾರವು 2024ರಲ್ಲಿ ಜಾರಿ ಮಾಡಿದ ಈ ಯೋಜನೆಯಡಿ ನಿಗದಿತ ಅನುದಾನದ ಖಚಿತತೆ ಇಲ್ಲದ ಕಾರಣ, ರಾಜ್ಯ ಸರ್ಕಾರ ಅನುಷ್ಠಾನಕ್ಕೆ ಹಿಂದೇಟು ಹಾಕಿತ್ತು. 2025ರ ಸೆಪ್ಟೆಂಬರ್ ತಿಂಗಳಲ್ಲಿ ಸಚಿವ ಸಂಪುಟದ ಅನುಮೋದನೆ ದೊರೆತ ಬಳಿಕ, ಯೋಜನೆ ಜಾರಿಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಸೂಕ್ತ ದತ್ತಾಂಶದ ಕೊರತೆ ಹಾಗೂ ಹೆಚ್ಚುವರಿ ಅನುದಾನ ಕೇಂದ್ರದಿಂದ ದೊರೆಯದ ಕಾರಣ ಯೋಜನೆಯನ್ನು ಇನ್ನೂ ಅನುಷ್ಠಾನ ಮಾಡಿಲ್ಲ. ಇದರ ಅರಿವಿಲ್ಲದ ವೃದ್ಧರು ಯೋಜನೆಯಡಿ ಚಿಕಿತ್ಸೆ ನಿರಾಕರಿಸಿರುವ ಆಸ್ಪತ್ರೆಗಳ ಪ್ರತಿನಿಧಿಗಳ ಜತೆಗೆ ವಾಗ್ವಾದಕ್ಕೆ ಇಳಿಯುತ್ತಿದ್ದಾರೆ.

'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯನ್ನು (ಎಬಿ-ಪಿಎಂಜೆಎವೈ) ಕೇಂದ್ರ ಸರ್ಕಾರವು ವಿಸ್ತರಿಸಿ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಅನ್ವಯವಾಗುವಂತೆ ರೂಪಿಸಿತ್ತು. ಇದು ₹5 ಲಕ್ಷದವರೆಗೆ ಆರೋಗ್ಯ ವಿಮೆಯ ಭರವಸೆ ಒದಗಿಸಲಿದೆ. ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು (ಎನ್‌ಎಚ್‌ಎ) ದೇಶದಲ್ಲಿ ಈ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿದೆ.

**2 ಲಕ್ಷ ಕಾರ್ಡ್:** ಎನ್‌ಎಚ್‌ಎ ಪೋರ್ಟಲ್ ಮೂಲಕವೇ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಕಾರ್ಡ್ ಪಡೆಯುವ ಅವಕಾಶ ನೀಡಲಾಗಿದೆ. ರಾಜ್ಯದಲ್ಲಿ ಎರಡು ಲಕ್ಷಕ್ಕೂ ಅಧಿಕ ಮಂದಿ 'ವಯೋ ವಂದನಾ' ಕಾರ್ಡ್ ಪಡೆದಿದ್ದಾರೆ. ಆದರೆ, ಯೋಜನೆ ಜಾರಿಯಾಗದ ಪರಿಣಾಮ ಈ ಕಾರ್ಡ್‌ಗಳು ನಿರರ್ಥಕವಾಗುತ್ತಿವೆ. ಕಾರ್ಡ್ ಹೊಂದಿದ್ದರೂ ಚಿಕಿತ್ಸೆ ಸಿಗದ ಪರಿಣಾಮ ಲಕ್ಷಾಂತರ ರೂಪಾಯಿ ಚಿಕಿತ್ಸಾ ವೆಚ್ಚ ಭರಿಸುವುದು ಅನಿವಾರ್ಯವಾಗಿದೆ.

'ವಯೋ ವಂದನಾ ಯೋಜನೆ ಜಾರಿಗೆ ಆದೇಶವಾದರೂ ಅನುಷ್ಠಾನವಾಗಿಲ್ಲ. ಆದರೆ, ಕಾರ್ಡ್ ವಿತರಣೆ ಮುಂದುವರಿದ ಪರಿಣಾಮ ಫಲಾನುಭವಿಗಳು ಯೋಜನೆಯಡಿ ಚಿಕಿತ್ಸೆ ಪಡೆಯಲು ಬರುತ್ತಿದ್ದಾರೆ. ಯೋಜನೆ ಜಾರಿಯಾಗಿಲ್ಲ ಎಂದರೂ ಅವರು ನಂಬುತ್ತಿಲ್ಲ. ನಾವು ಅಸಹಾಯಕರಾಗಿದ್ದು, ಅವರಿಗೆ ಮನವರಿಕೆ ಮಾಡಿಸುವುದು ಕಷ್ಟಸಾಧ್ಯ' ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರೊಬ್ಬರು ತಿಳಿಸಿದರು.

**ಅಂಕಿ ಅಂಶಗಳು**

**2,16,388**
ವಯೋ ವಂದನಾ ಯೋಜನೆಯಡಿ ಕಾರ್ಡ್‌ಗೆ ಅರ್ಜಿ ಸಲ್ಲಿಕೆ

**2,16,265**
ಯೋಜನೆಯಡಿ ಈಗಾಗಲೇ ಕಾರ್ಡ್ ಪಡೆದವರು

**ಯೋಜನೆಗೆ ಸಂಬಂಧಿಸಿದಂತೆ ದತ್ತಾಂಶ, ಅನುದಾನದ ವಿಷಯದಲ್ಲಿ ಕೆಲ ಗೊಂದಲಗಳಿವೆ. ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಈ ಬಗ್ಗೆ ಪತ್ರ ಬರೆಯಲಾಗಿದೆ**

**ಹರ್ಷ ಗುಪ್ತ**
ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ

**ಒಬ್ಬರಿಗೆ ₹5 ಲಕ್ಷ ವಿಮೆ**

ರಾಜ್ಯದಲ್ಲಿ ಸದ್ಯ ಜಾರಿಯಲ್ಲಿರುವ 'ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ' ಯೋಜನೆಯಡಿ ಬಿಪಿಎಲ್ ಕುಟುಂಬದ ಎಲ್ಲ ಸದಸ್ಯರಿಗೆ ಸೇರಿ ₹5 ಲಕ್ಷದವರೆಗೆ ಆರೋಗ್ಯ ವಿಮೆ ಒದಗಿಸಿದರೆ, 'ಆಯುಷ್ಮಾನ್ ವಯೋ ವಂದನಾ' ಯೋಜನೆಯಡಿ 70 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ₹5 ಲಕ್ಷದವರೆಗೆ ಆರೋಗ್ಯ ವಿಮೆ ನೀಡಲಾಗುತ್ತದೆ. 70 ವರ್ಷ ಮೇಲ್ಪಟ್ಟ ಎಲ್ಲರೂ ಈ ಯೋಜನೆಯಡಿ ಬರಲಿದ್ದು, ನೋಂದಣಿಗೆ ಆಧಾರ್ ಕಾರ್ಡ್ ಮಾತ್ರ ಅಗತ್ಯ. ಯೋಜನೆಯಡಿ ಚಿಕಿತ್ಸೆಗೆ 'ವಯೋ ವಂದನಾ' ಕಾರ್ಡ್ ಕಡ್ಡಾಯವಾಗಿದೆ. ಆದ್ದರಿಂದ, ರಾಜ್ಯದಲ್ಲಿಯೂ 70 ವರ್ಷ ಮೇಲ್ಪಟ್ಟವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಡ್ ಪಡೆದಿದ್ದಾರೆ.

### ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ ಬೆಟ್ಟದ ಸಾಲು

# ಸಾಸಲು ಬೆಟ್ಟದಲ್ಲಿ ಕೊಂಬಿನ ಗೂಬೆ

• ನಟರಾಜ ನಾಗಸಂದ್ರ

ದೊಡ್ಡಬಳ್ಳಾಪುರ: ತಾಲ್ಲೂಕಿನ ಸಾಸಲು ಹೋಬಳಿಯ ಬೆಟ್ಟದ ಸಾಲಿನಲ್ಲಿ ಅಪರೂಪದ ಕೊಂಬಿನ ಗೂಬೆಯ ಕುಟುಂಬ ಕಂಡು ಬಂದಿದೆ.

ಮರಿಯನ್ನು ಪೋಷಣೆ ಮಾಡುತ್ತಿರುವ ತಾಯಿ ಹಾಗೂ ಆಹಾರ ತಂದು ಕೊಡುತ್ತ ಸಮೀಪದ ಮರದಲ್ಲಿ ಕುಳಿತು ಕಾವಲು ಕಾಯುತ್ತಿರುವ ಗಂಡು ಗೂಬೆ ಕಂಡು ಬಂದಿದೆ.



ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ ಬೆಟ್ಟದ ಸಾಲಿನಲ್ಲಿ ಅಮ್ಮನ ಮಡಿಲಿನಲ್ಲಿ ಕೊಂಬಿನ ಗೂಬೆ ಮರಿ

ಸ್ಥಳೀಯವಾಗಿ ಕೊಂಬಿನ ಗುಮ್ಮ ಎಂದು ಕರೆಯಲಾಗುವ ಈ ಗೂಬೆ ಇಂಡಿಯನ್ ಗ್ರೇಟ್ ಹಾರನ್ಡ್ ಔಲ್ ಅಥವಾ ಇಂಡಿಯನ್ ಈಗಲ್ ಔಲ್ ಎಂದು ಚಿರಪರಿಚಿತ. ವಾಮಾಚಾರದಲ್ಲಿ ಬಳಸಲು ಕೊಂಬಿನ ಗೂಬೆಗಳನ್ನು ಬೇಟೆಯಾಡುವ ಕಾರಣ ಇದರ ಸಂತತಿ ಕ್ಷೀಣಿಸುತ್ತಿದೆ.

ಸಾಮಾನ್ಯವಾಗಿ ಗರುಡನ ಗಾತ್ರದ ಕೊಂಬಿನ ಗೂಬೆ ಬಯಲು ಪ್ರದೇಶದ ಕಲ್ಲು ಬೆಟ್ಟ, ಕುರುಚಲು ಪ್ರದೇಶದ ಕಾಡುಗಳಲ್ಲಿ ಕಾಣಿಸುವ ನಿಶಾಚರಿ.

ಪಾದಗಳವರೆಗೂ ಪುಕ್ಕ ಮುಚ್ಚಿಕೊಂಡಿದ್ದು, ಬೂದು ಬಣ್ಣದ ಎದೆಯ ಮೇಲೆ ಕಪ್ಪು ಗೀರುಗಳ ಮಚ್ಚೆ ಇರುತ್ತದೆ.

ರಾತ್ರಿ ಇಲಿ, ಹಾವು, ನಿದ್ರಿಸುತ್ತಿರುವ ಹಕ್ಕಿ, ನೀರಿನ ಬಳಿಯ ಕಪ್ಪೆ, ಮೀನು, ಏಡಿ ಇತ್ಯಾದಿ ಜಲಚರಗಳನ್ನು ಹಿಡಿದು ತಿನ್ನುತ್ತದೆ.

ನವೆಂಬರ್‌ನಿಂದ ಏಪ್ರಿಲ್‌ವರೆಗೆ ಗೂಡು ಕಟ್ಟಿ ಮೊಟ್ಟೆ ಇಟ್ಟು, ಮರಿ ಮಾಡುತ್ತದೆ.

# 2030ಕ್ಕೆ ಜೆನ್ ಝೀ ಪೀಳಿಗೆ ಖರ್ಚು ₹120 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಜೆನ್ ಝೀ ತಲೆಮಾರಿನವರು 2030ರ ವೇಳೆಗೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 27ರಷ್ಟಾಗಲಿದ್ದಾರೆ. ಈ ವೇಳೆಗೆ ಇವರು ವಿವಿಧ ವಸ್ತುಗಳ ಖರೀದಿಗೆ ಖರ್ಚು ಮಾಡುವ ಒಟ್ಟು ಮೊತ್ತವು ₹120 ಲಕ್ಷ ಕೋಟಿ (1.3 ಟ್ರಿಲಿಯನ್ ಡಾಲರ್) ದಾಟಲಿದೆ ಎಂದು ರೆಡ್‌ಸೀರ್ ಕನ್ಸಲ್ಟಿಂಗ್ ಕಂಪನಿ ವರದಿ ತಿಳಿಸಿದೆ.




1997ರಿಂದ 2012ರ ನಡುವೆ ಜನಿಸಿದವರನ್ನು ಜೆನ್ ಝೀ ತಲೆಮಾರಿನವರು ಎಂದು ಗುರುತಿಸಲಾಗುತ್ತಿದೆ.

ಸೌಂದರ್ಯ ಮತ್ತು ವೈಯಕ್ತಿಕ ಆರೈಕೆಗೆ (ಬಿಪಿಸಿ) ಜೆನ್ ಝೀ ತಲೆಮಾರಿನವರು ಹೆಚ್ಚಿನ ಆದ್ಯತೆ ನೀಡುತ್ತಿದ್ದು, 2030ರ ವೇಳೆಗೆ ಈ ವಲಯಕ್ಕೆ ಖರ್ಚು ಮಾಡುವ ಮೊತ್ತವು ₹1.75 ಲಕ್ಷ ಕೋಟಿಯಷ್ಟಾಗುವ ಅಂದಾಜಿದೆ.

ಜೆನ್ ಝೀ ಯುವತಿಯರಲ್ಲಿ ಪ್ರತಿ ಇಬ್ಬರಲ್ಲಿ ಒಬ್ಬರು ಈ ಉತ್ಪನ್ನಗಳಿಗಾಗಿ ತಮ್ಮ ಆದಾಯದಲ್ಲಿ ಶೇ 20ಕ್ಕೂ ಹೆಚ್ಚು ಹಂಚಿಕೆ ಮಾಡುತ್ತಾರೆ. ಯುವಕರು ಸಹ ಸೌಂದರ್ಯಕ್ಕೆ ಆದ್ಯತೆ ನೀಡುತ್ತಿದ್ದು, ತ್ವಚೆಯ ಆರೈಕೆಗೆ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.

₹1 ಸಾವಿರದೊಳಗಿನ ಫ್ಯಾಷನ್ ಉತ್ಪನ್ನಗಳು ಇವರಿಗೆ ಆದ್ಯತೆಯಾಗಿವೆ. ಮೂರನೇ ಒಂದು ಭಾಗದಷ್ಟು ಜನರು ತಮ್ಮ ಆದಾಯದಲ್ಲಿ ಕನಿಷ್ಠ ಶೇ 20ರಷ್ಟನ್ನು ದೈಹಿಕ ದೃಢತೆ ಮತ್ತು ಕ್ರೀಡಾ ಚಟುವಟಿಕೆಗೆ ಖರ್ಚು ಮಾಡುತ್ತಾರೆ.

ಈ ತಲೆಮಾರಿನವರು ಆರೋಗ್ಯಕರ ಆಹಾರ ಪದ್ಧತಿಯ ಕಡೆಗೆ ಹೆಚ್ಚಿನ ಒಲವು ತೋರಿದ್ದಾರೆ. 2024 ಮತ್ತು 2025ರ ನಡುವೆ ಪೋಷಕಾಂಶಯುಕ್ತ ಆಹಾರ ಉತ್ಪನ್ನಗಳ ಮಾರಾಟವು ಆನ್‌ಲೈನ್‌ನಲ್ಲಿ ಶೇ 230ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

# ‘ಭದ್ರತಾ ಮಂಡಳಿಯಲ್ಲಿ ಸಮಸ್ಯೆ ಇದೆ’

ವಿಶ್ವಸಂಸ್ಥೆ (ಪಿಟಿಐ): ‘ಭದ್ರತಾ ಮಂಡಳಿಯಲ್ಲಿ ಸಮಸ್ಯೆ ಇದೆ ಎಂಬುದನ್ನು ಗುರುತಿಸುವ ಅಗತ್ಯವಿದೆ. ಈಗಿನ ಭದ್ರತಾ ಮಂಡಳಿಯು ಪ್ರಸ್ತುತ ಜಗತ್ತನ್ನು ಪ್ರತಿನಿಧಿಸುವುದಿಲ್ಲ. ಕಾಯಂ ಸದಸ್ಯ ರಾಷ್ಟ್ರಗಳು ತಮ್ಮ ವೀಟೊ ಅಧಿಕಾರವನ್ನು ಬಳಸಿ ಸಂಘರ್ಷಗಳನ್ನು ನಿಲ್ಲಿಸಲು ಅವಕಾಶ ನೀಡುತ್ತಿಲ್ಲ’ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರಸ್ ಅವರು ಮಾರ್ಮಿಕವಾಗಿ ಹೇಳಿದರು.



ಅಂಟೋನಿಯೊ ಗುಟೆರಸ್

ಬೈರೂತ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗಿನ ಭದ್ರತಾ ಮಂಡಳಿಯು 1945ರ ನಂತರದ ಜಗತ್ತನ್ನು ಪ್ರತಿನಿಧಿಸುತ್ತದೆ. ಅದು ಈಗಿನ ರಾಜಕೀಯ ಹಾಗೂ ಭೌಗೋಳಿಕ ವಾಸ್ತವ ಸಂಗತಿಗಳನ್ನು ಪ್ರತಿಬಿಂಬಿಸುವುದಿಲ್ಲ’ ಎಂದರು.

ಭದ್ರತಾ ಮಂಡಳಿಯಲ್ಲಿ 15 ಸದಸ್ಯ ರಾಷ್ಟ್ರಗಳಿವೆ. ಈ ಪೈಕಿ ಚೀನಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಹಾಗೂ ಅಮೆರಿಕ 5 ಕಾಯಂ ಸದಸ್ಯ ರಾಷ್ಟ್ರಗಳು. ಇವೆಲ್ಲ ಏಷ್ಯಾ, ಯುರೋಪ್, ಅಮೆರಿಕ ಪ್ರತಿನಿಧಿಸುತ್ತವೆ. ಆದರೆ ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕದಿಂದ ಯಾವುದೇ ರಾಷ್ಟ್ರಗಳು ಕಾಯಂ ಸದಸ್ಯರಾಗಿಲ್ಲ. ಜಾಗತಿಕ ಸಂಪತ್ತು ಹಾಗೂ ಹೆಚ್ಚಿನ ಜನಸಂಖ್ಯೆ ಹೊಂದಿರುವ ಏಷ್ಯಾದಿಂದಲೂ ಒಂದೇ ರಾಷ್ಟ್ರ ಕಾಯಂ ಸದಸ್ಯತ್ವ ಹೊಂದಿದೆ’ ಎಂದು ಅವರು ಹೇಳಿದರು.

ಹೀಗಾಗಿ ಭದ್ರತಾ ಮಂಡಳಿಯ ವೀಟೊಗಳು ನ್ಯಾಯಸಮ್ಮತದ ಕೊರತೆ ಹಾಗೂ ದಕ್ಷತೆಯ ಸಮಸ್ಯೆಯನ್ನು ಹೊಂದಿವೆ ಎಂದು ಟೀಕಿಸಿದರು.

# ಜಯಂತಿ ಕುಮರೇಶ್‌ಗೆ ‘ಸಂಗೀತ ಕಲಾನಿಧಿ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ವೀಣಾ ವಾದಕಿ ಜಯಂತಿ ಕುಮರೇಶ್ ಅವರು ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ಪ್ರತಿಷ್ಠಿತ ‘ಸಂಗೀತ ಕಲಾನಿಧಿ’ ಪ್ರಶಸ್ತಿಗೆ ಭಾಜನರಾಗಿದ್ದಾರೆ.




ಜಯಂತಿ ಕುಮರೇಶ್

‘ಸರಸ್ವತಿ ವೀಣೆಯಲ್ಲಿನ ಪಾಂಡಿತ್ಯಕ್ಕಾಗಿ ಮತ್ತು ಕರ್ನಾಟಕ ಸಂಗೀತವನ್ನು ಯುವ ಜನರೆಡೆಗೆ ಕೊಂಡೊಯ್ಯುವಲ್ಲಿನ ಹೊಸ ಆಲೋಚನೆಗಳಿಗಾಗಿ ಜಯಂತಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಅಧ್ಯಕ್ಷ ಎನ್.ಮುರಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

57 ವರ್ಷದ ಜಯಂತಿ ಅವರು ದಿವಂಗತ ಉಸ್ತಾದ್ ಜಾಕೀರ್ ಹುಸೇನ್ ಸೇರಿದಂತೆ ಹಲವು ಪ್ರಮುಖ ಕಲಾವಿದರ ಜತೆ ಸಂಗೀತ ಕಾರ್ಯಕ್ರಮ ನೀಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಸುಗಂಧಾ ಕಲಾಮೇಘಂ ಮತ್ತು ಮೃದಂಗ ವಾದಕ ತ್ರಿಚೂರ್ ಸಿ.ನರೇಂದ್ರನ್ ಅವರನ್ನು ‘ಸಂಗೀತ ಕಲಾ ಆಚಾರ್ಯ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸುಗಂಧಾ ಅವರು ಸಂಗೀತ ಕಲಾ ಆಚಾರ್ಯ ಆರ್. ವೆಂಕಟರಾಮನ್ ಅವರಿಂದ ವೀಣಾ ವಾದನ ಕಲಿತಿರುವುದರ ಜತೆಗೆ, ನವದೆಹಲಿಯ ಗಾಂಧರ್ವ ಮಹಾ ವಿದ್ಯಾಲಯದಲ್ಲಿ ಹಿಂದೂಸ್ತಾನಿ ಸಂಗೀತದಲ್ಲಿ ತರಬೇತಿ ಪಡೆದಿದ್ದಾರೆ.

ನರೇಂದ್ರನ್ ಅವರು ಆಲ್ ಇಂಡಿಯಾ ರೇಡಿಯೊದಲ್ಲಿ ಕಲಾವಿದರಾಗಿ ಕೆಲಸ ಮಾಡಿದ್ದು, ಹಲವು ಮಂದಿಗೆ ತರಬೇತಿ ನೀಡಿದ್ದಾರೆ. ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯೆಗೊ ಸ್ಟೇಟ್ ಯೂನಿವರ್ಸಿಟಿಯಲ್ಲಿ 2 ವರ್ಷ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ.

# ಶುಭಮನ್, ಸ್ಮೃತಿಗೆ 'ವಾರ್ಷಿಕ ಕಿರೀಟ'

## ಬಿಸಿಸಿಐ 'ನಮನ್' ಪ್ರಶಸ್ತಿ: ರಾಹುಲ್ ದ್ರಾವಿಡ್, ರೋಜರ್ ಬಿನ್ನಿಗೆ ಜೀವಮಾನ ಸಾಧನೆ ಗೌರವ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯ ಆ ಭವ್ಯ ವೇದಿಕೆಯಲ್ಲಿ ಭಾನುವಾರ ರಾತ್ರಿ ಭಾರತದ 'ಕ್ರಿಕೆಟ್ ಶಕ್ತಿ'ಯ ಪ್ರದರ್ಶನ ನಡೆಯಿತು. ಹಾಲಿ ಮತ್ತು ಭಾವಿ ತಾರೆಗಳು ಕಣ್ಮನ ಸೆಳೆದರು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯೋಜಿಸಿದ್ದ 'ನಮನ್ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ಅದು.

ಭಾರತ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡಗಳ ನಾಯಕ ಶುಭಮನ್ ಗಿಲ್ 2024-25ರ ಸಾಲಿನ 'ಪಾಲಿ ಉಮ್ರಿಗರ್ ಶ್ರೇಷ್ಠ ಆಟಗಾರ' ಪ್ರಶಸ್ತಿ ಗಳಿಸಿದರು. ಮಹಿಳಾ ತಂಡದ ಉಪನಾಯಕಿ ಸ್ಮೃತಿ ಮಂಧಾನ ಅವರು ಶ್ರೇಷ್ಠ ಅಂತರರಾಷ್ಟ್ರೀಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು. ಗಿಲ್ ಅವರಿಗೆ ಇದು ಎರಡನೇ ಪ್ರಶಸ್ತಿ ಆಗಿದೆ. 2023ರಲ್ಲಿಯೂ ಅವರು ಈ ಗೌರವಕ್ಕೆ ಪಾತ್ರರಾಗಿದ್ದರು.

2025ರಲ್ಲಿ ಗಿಲ್ ಅವರು ಇಂಗ್ಲೆಂಡ್ ಪ್ರವಾಸದಲ್ಲಿ ಭಾರತ ತಂಡದ ನಾಯಕರಾಗಿದ್ದರು. ಐದು ಪಂದ್ಯಗಳ ಸರಣಿಯಲ್ಲಿ ತಂಡವು ಸಮಬಲ ಸಾಧಿಸಿತು. ಅದರಲ್ಲಿ 10 ಇನಿಂಗ್ಸ್‌ಗಳಲ್ಲಿ 754 ರನ್ ಪೇರಿಸುವಲ್ಲಿ ಗಿಲ್ ಯಶಸ್ವಿಯಾಗಿದ್ದರು. ಅದರಲ್ಲಿ ನಾಲ್ಕು ಶತಕಗಳಿದ್ದವು. ಭಾರತವು ಚಾಂಪಿಯನ್ಸ್ ಟ್ರೋಫಿ ಜಯಿಸುವಲ್ಲಿಯೂ ಗಿಲ್ ಪಾತ್ರ ಮಹತ್ವದ್ದಾಗಿತ್ತು. ಆರಂಭಿಕ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು ಶತಕ ಗಳಿಸಿದ್ದರು. ಟೂರ್ನಿಯಲ್ಲಿ ಒಟ್ಟು 188 ರನ್ ಸೇರಿಸಿದ್ದರು.

ಸ್ಮೃತಿ ಅವರು ಹೋದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 1703 ರನ್ ಪೇರಿಸಿದ್ದರು. ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಂದು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ಮಹಿಳಾ ಆಟಗಾರ್ತಿಯೆಂಬ ದಾಖಲೆ ಬರೆದಿದ್ದರು. ಭಾರತ ಮಹಿಳಾ ತಂಡವು ಮೊದಲ ಬಾರಿಗೆ ಜಯಿಸಿದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಸ್ಮೃತಿ 9 ಪಂದ್ಯಗಳಿಂದ 434 ರನ್ ಗಳಿಸಿದ್ದರು. ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಭಾರತ ತಂಡದ ಆಟಗಾರ್ತಿ ಅವರಾಗಿದ್ದರು.

ಈ ಸಂದರ್ಭದಲ್ಲಿ ವಿವಿಧ ವಿಭಾಗಗಳಲ್ಲಿ ಐಸಿಸಿ ವಿಶ್ವಕಪ್ ಜಯಿಸಿದ ತಂಡಗಳನ್ನೂ ಗೌರವಿಸಲಾಯಿತು.

ಪುರುಷರ ವಿಭಾಗದಲ್ಲಿ ಚಾಂಪಿಯನ್ಸ್ ಟ್ರೋಫಿ, ಟಿ20 ವಿಶ್ವಕಪ್, 19 ವರ್ಷದೊಳಗಿನವರ ಏಕದಿನ ವಿಶ್ವಕಪ್, ಮಹಿಳೆಯರ ವಿಭಾಗದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಮತ್ತು 19 ವರ್ಷದೊಳಗಿನವರ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಸನ್ಮಾನಿಸಲಾಯಿತು.



ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾರತ ತಂಡದ ಮೊಹಮ್ಮದ್ ಸಿರಾಜ್ ಮತ್ತು ಸಂಜು ಸ್ಯಾಮ್ಸನ್ ಅವರು ಈಚೆಗೆ ಜಯಿಸಿದ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಕಾಣಿಸಿಕೊಂಡರು



ನವದೆಹಲಿಯಲ್ಲಿ ಭಾನುವಾರ ನಡೆದ ಬಿಸಿಸಿಐ 'ನಮನ್ ಪ್ರಶಸ್ತಿ' ಕಾರ್ಯಕ್ರಮದಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡದ ಜೆಮಿಮಾ ರಾಡ್ರಿಗಸ್, ಅರುಂಧತಿ ರೆಡ್ಡಿ ಮತ್ತು ಸ್ಮೃತಿ ಮಂಧಾನ ಪಿಟಿಐ ಚಿತ್ರಗಳು

### ಬಿನ್ನಿ, ದ್ರಾವಿಡ್, ಮಿಥಾಲಿಗೆ ಜೀವಮಾನ ಸಾಧನೆ ಗೌರವ

1983ರ ವಿಶ್ವಕಪ್ ವಿಜೇತ ಭಾರತ ತಂಡದ ಆಲ್‌ರೌಂಡರ್ ರೋಜರ್ ಬಿನ್ನಿ, ಮಾಜಿ ನಾಯಕ ಮತ್ತು ಕೋಚ್ ರಾಹುಲ್ ದ್ರಾವಿಡ್ ಹಾಗೂ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ 'ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಭಾರತದ ಕ್ರಿಕೆಟ್ ಸಮೃದ್ಧವಾಗಿ ಬೆಳೆದಿರುವುದನ್ನು ಇಲ್ಲಿ ನೋಡಬಹುದಾಗಿದೆ. ಈ ರೀತಿ ಕ್ರಿಕೆಟ್ ಬೆಳೆಯಲು ಆಟಗಾರರು, ಆಡಳಿತಗಾರರು ಮತ್ತು ಅಭಿಮಾನಿಗಳು ಒಟ್ಟಾಗಿ ಶ್ರಮಿಸಿದ್ದರಿಂದ ಸಾಧ್ಯವಾಗಿದೆ. ಕಳೆದ ಮೂರು ದಶಕಗಳಲ್ಲಿ ಮಹತ್ತರವಾದ ಬೆಳವಣಿಗೆಯನ್ನು ದೇಶದ ಕ್ರಿಕೆಟ್ ದಾಖಲಿಸಿರುವುದನ್ನು ನೋಡುತ್ತಿದ್ದೇನೆ' ಎಂದು ರಾಹುಲ್ ದ್ರಾವಿಡ್ ಹೇಳಿದರು.

ದ್ರಾವಿಡ್ ಅವರು 1996ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

'ಭಾರತದ ಕ್ರಿಕೆಟ್ ಕ್ಷೇತ್ರದಲ್ಲಿ ಯಾವಾಗಲೂ ಉತ್ತಮ ಪ್ರತಿಭಾನ್ವಿತರು ಇದ್ದರು. ಅಲ್ಲದೇ ಒಳ್ಳೆಯ ಆಡಳಿತಗಾರರೂ ಇದ್ದರು. ಯಾವಾಗಲೂ ಒಳ್ಳೆಯ ತರಬೇತುದಾರರು ತಂಡಕ್ಕೆ ಲಭಿಸಿದರು. ಇದೆಲ್ಲದರ ಜೊತೆಗೆ ಅತ್ಯಗತ್ಯವಾದ ಮೂಲಸೌಲಭ್ಯಗಳೂ ಲಭಿಸಿದವು. ನಮ್ಮಲ್ಲಿ ಅಮೋಘವಾದ ದೇಶಿ ಕ್ರಿಕೆಟ್ ವ್ಯವಸ್ಥೆ ಇದೆ. ಜೂನಿಯರ್ ಕ್ರಿಕೆಟ್ ವ್ಯವಸ್ಥೆಯೂ ಅತ್ಯದ್ಭುತವಾಗಿದೆ. ಇದೆಲ್ಲಕ್ಕೂ ಕಳಶವಿಟ್ಟಂತೆ ಅಪಾರವಾಗಿ ಪ್ರೀತಿಸುವ ಅಭಿಮಾನಿಗಳಿದ್ದಾರೆ. ವಿಶ್ವದಲ್ಲಿಯೇ ಇಂತಹ ಅಭಿಮಾನಿಗಳ ವಲಯ ಯಾವ ದೇಶಕ್ಕೂ ಸಿಕ್ಕಿಲ್ಲ' ಎಂದು ಹೇಳಿದರು.

2024ರಲ್ಲಿ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿದ್ದ ಸಂದರ್ಭದಲ್ಲಿ ದ್ರಾವಿಡ್ ಮುಖ್ಯ ಕೋಚ್ ಆಗಿದ್ದರು.

Dr. Rajkuma

## ❖ ಎತ್ತಿನಹೊಳೆಗೆ ಷರತ್ತುಬದ್ಧ ಅನುಮತಿ

**ಸಂದರ್ಭ: ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 277 ಎಕರೆ (111 ಹೆಕ್ಟೇರ್) ಕಾಡುಬಳಸಲು ಕೇಂದ್ರ ಪರಿಸರ ಸಚಿವಾಲ ಯದ ಅರಣ್ಯ ಸಲಹಾ ಸಮಿತಿ ಷರತ್ತು ಬದ್ಧ ಅನುಮತಿ ನೀಡಿದೆ.**



### ಯೋಜನೆಗೆ 277 ಎಕರೆ ಕಾಡು ಬಳಕೆಗೆ ಅರಣ್ಯ ಸಲಹಾ ಸಮಿತಿ ಒಪ್ಪಿಗೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 277 ಎಕರೆ (111 ಹೆಕ್ಟೇರ್) ಕಾಡು ಬಳಸಲು ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ. ಇದರಿಂದಾಗಿ, ಸಚಿವಾಲಯದ ತಕರಾರಿನ ಕಾರಣದಿಂದ ವರ್ಷದಿಂದ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಮತ್ತೆ ಚಾಲನೆ ಸಿಗಲಿದೆ.

ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ 2025ರ ಜೂನ್ 24 ಹಾಗೂ ಅಕ್ಟೋಬರ್ 27ರಂದು ನಡೆದ ಸಭೆಗಳಲ್ಲಿ ಒಪ್ಪಿಗೆ ಸಿಕ್ಕಿರಲಿಲ್ಲ. ಯೋಜನೆಯ ಬಗ್ಗೆ ಹೆಚ್ಚುವರಿ ಮಾಹಿತಿ ಕೇಳಿದ್ದ ಸಮಿತಿಯು, ಸಚಿವಾಲಯದ ಪ್ರಾದೇಶಿಕ ಕಚೇರಿಯಿಂದ ಸ್ಥಳ ಪರಿಶೀಲನಾ ವರದಿಯನ್ನು ತರಿಸಿಕೊಂಡಿತ್ತು. ಯಾವುದೇ ಅನುಮತಿ ಪಡೆಯದೇ ಅರಣ್ಯ ಭೂಮಿಯಲ್ಲಿ ಕಾಮಗಾರಿ ನಡೆಸಲಾಗಿದೆ ಎಂದು ವರದಿ ನೀಡಿದ್ದ ಪ್ರಾದೇಶಿಕ ಕಚೇರಿ, ಇದರಲ್ಲಿ ಅರಣ್ಯ ಇಲಾಖೆಯ ಲೋಪವೂ ಇದೆ ಎಂದು ಬೆಳಕು ಚೆಲ್ಲಿತ್ತು.

'ಪರಿಷ್ಕೃತ ಪ್ರಸ್ತಾವದ ಪ್ರಕಾರ, ಯೋಜನೆಗೆ 111 ಹೆಕ್ಟೇರ್ ಅರಣ್ಯದ ಬದಲು 108 ಹೆಕ್ಟೇರ್ ಬಳಸಿಕೊಳ್ಳಲಾಗುವುದು. 69.80 ಹೆಕ್ಟೇರ್‌ನಲ್ಲಿ ಕಾಲುವೆ ನಿರ್ಮಾಣ ಮಾಡಲಾಗುವುದು. ಹೂಳು ಸುರಿಯುವ ಪ್ರದೇಶವನ್ನು 103 ಹೆಕ್ಟೇರ್‌ನಿಂದ 38 ಹೆಕ್ಟೇರ್‌ಗೆ ಇಳಿಸಲಾಗಿದೆ. ಕಾಮಗಾರಿ ನಡೆಸುವ ಪ್ರದೇಶಗಳಲ್ಲಿ ಹೂಳು ಸುರಿಯುವುದಿಲ್ಲ. ಜತೆಗೆ, ಹಾಸನ ಜಿಲ್ಲೆಯಲ್ಲಿ 107 ಹೆಕ್ಟೇರ್‌ನಲ್ಲಿ ನಿಯಮ ಉಲ್ಲಂಘನೆ ಆಗಿದೆ. ಈ ಪ್ರದೇಶವು ಕಂದಾಯ ದಾಖಲೆಗಳಲ್ಲಿ ಅರಣ್ಯವೆಂದು ದಾಖಲಾಗಿಲ್ಲ. ರೈತರು ಸಾಗುವಳಿ ಮಾಡುತ್ತಿದ್ದಾರೆ ಎಂದು ರಾಜ್ಯ ಸರ್ಕಾರ ಸಮಜಾಯಿಷಿ ನೀಡಿದೆ. ನಿಯಮ ಉಲ್ಲಂಘನೆ ಬಗ್ಗೆ ಅರಣ್ಯ ಇಲಾಖೆಯಿಂದ ವಿವರಣೆ ಕೇಳಲಾಗಿದೆ' ಎಂದು ಪ್ರಾದೇಶಿಕ ಕಚೇರಿ ವರದಿ ಸಲ್ಲಿಸಿತ್ತು. ಆ ಬಳಿಕ ಸಚಿವಾಲಯವು ರಾಜ್ಯ ಅರಣ್ಯ ಇಲಾಖೆಯಿಂದ ಇನ್ನಷ್ಟು ವಿವರಣೆ ಕೇಳಿತ್ತು. ಅರಣ್ಯ ಸಚಿವಾಲಯದಿಂದ ಅನುಮತಿ ಪಡೆಯಲು ಕರ್ನಾಟಕ ಸರ್ಕಾರವು ವರ್ಷದಿಂದ ಹರಸಾಹಸ ಪಟ್ಟಿತ್ತು. ಇದೀಗ, ಕೇಂದ್ರದಿಂದ ಅನುಮೋದನೆ ದೊರಕಿದೆ.

#### ಷರತ್ತುಗಳೇನು?

- ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಮ ಉಲ್ಲಂಘಿಸಿದವರ ವಿರುದ್ಧ ಸೆಕ್ಷನ್ 3 ಎ ಹಾಗೂ 3 ಬಿ ಅಡಿಯಲ್ಲಿ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು.
- ವಿಶ್ವೇಶ್ವರಯ್ಯ ಜಲ ನಿಗಮವು ನಿಯಮ ಉಲ್ಲಂಘಿಸಿ ಬಳಸಿದ ಅರಣ್ಯ ಪ್ರದೇಶಕ್ಕೆ ದಂಡ ವಸೂಲಿ ಮಾಡಲಾಗುತ್ತದೆ. ಈ ಮೊತ್ತವು ಅರಣ್ಯ ಭೂಮಿಯ ಈಗಿನ ಒಟ್ಟು ಮೌಲ್ಯದ (ಎನ್‌ಪಿವಿ) ಐದು ಪಟ್ಟು ಆಗಿರುತ್ತದೆ. ಈ ಮೊತ್ತವನ್ನು ಕಾಂಪಾ ಖಾತೆಗೆ ವರ್ಗಾವಣೆ ಮಾಡುವ ವರೆಗೆ ಶೇ 12 ಬಡ್ಡಿ ವಸೂಲಿ ಮಾಡಬೇಕು.
- ನಿಯಮ ಉಲ್ಲಂಘಿಸಿ ಅರಣ್ಯ ಭೂಮಿ ಬಳಸಿರುವ ಪ್ರಕರಣಗಳಲ್ಲಿ ದಂಡ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಅರಣ್ಯ ಸಚಿವಾಲಯ ಜನವರಿ 21ರಂದು ಮಾರ್ಗಸೂಚಿ ಹೊರಡಿಸಿದೆ. ಈ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲನೆ ಆಗಿರುವುದನ್ನು ರಾಜ್ಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು. ದಂಡ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಜಾಗ ಗುರುತಿಸಬೇಕು.
- ಪೂರ್ವಾನುಮತಿ ಇಲ್ಲದೆ ಬಳಸಿರುವ ಉಳಿದ ಅರಣ್ಯ ಪ್ರದೇಶವನ್ನು ಜಲ ನಿಗಮದಿಂದ ವಾಪಸ್ ಪಡೆದು ಸೂಕ್ತ ಮರು ಸ್ಥಾಪನೆ ಮಾಡಬೇಕು. ಇದಕ್ಕೆ ತಗಲುವ ವೆಚ್ಚವನ್ನು ಜಲ ನಿಗಮದಿಂದಲೇ ವಸೂಲಿ ಮಾಡಬೇಕು.
- ವನ್ಯಜೀವಿಗಳ ಸಂರಕ್ಷಣೆಗಾಗಿ ವನ್ಯಜೀವಿ ಸಂರಕ್ಷಣಾ ಯೋಜನೆಯನ್ನು ರಾಜ್ಯ ಸರ್ಕಾರ ಸಲ್ಲಿಸಬೇಕು. ಇದನ್ನು ಭಾರತೀಯ ವನ್ಯಜೀವಿ ಸಂಸ್ಥೆಯಿಂದ ಪರಿಶೀಲನೆಗೆ ಒಳಪಡಿಸಬೇಕು.

#### ರಾಜ್ಯದ ನಿವೇದನೆ ಏನಾಗಿತ್ತು?

'ಬರಪೀಡಿತ ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು 252 ಕಿ.ಮೀ. ಗುರುತ್ವಾಕರ್ಷಣೆ ಕಾಲುವೆ ನಿರ್ಮಿಸಲಾಗುತ್ತಿದ್ದು, 246 ಕಿ.ಮೀ. ಕಾಮಗಾರಿ ಮುಗಿದಿದೆ. ಕೇವಲ ಆರು ಕಿ.ಮೀ. ಕಾಮಗಾರಿ ಅರಣ್ಯ ಪ್ರದೇಶದಲ್ಲಿ ಸಾಗಲಿದೆ. ಅರಣ್ಯ ತೀರುವಳಿ ಪ್ರಸ್ತಾವಕ್ಕೆ ಅನುಮೋದನೆ ನೀಡಿದರೆ 75 ಲಕ್ಷ ಜನರಿಗೆ ನೀರು ಪೂರೈಸಲು ಅನುಕೂಲವಾಗಲಿದೆ' ಎಂದು ರಾಜ್ಯ ಸರ್ಕಾರ ನಿವೇದಿಸಿಕೊಂಡಿತ್ತು.

## ❖ ನುಗಡೋಣಿ, ಹೆನ್ರಿ ಮೆಂಡೋನ್ಸಾಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ಸಂದರ್ಭ: ಕನ್ನಡದ ಸಾಹಿತಿ ಅಮರೇಶ ನುಗಡೋಣಿ ಅವರ 'ದಡ ಸೇರಿಸು ತಂದೆ' ಸಣ್ಣ ಕಥೆಗಳ ಸಂಕಲನ ಮತ್ತು ಮಂಗಳೂರಿನ ಕೊಂಕಣಿ ಸಾಹಿತಿ ಎಚ್.ಎಂ. ಪೆರ್ನಾಲ್ (ಹೆನ್ರಿ ಮೆಂಡೋನ್ಸಾ) ಅವರ 'ಕೊಂಕಣಿ ಕಾಂ: ರುಪಾಂ ಆನಿ ರೂಪಕಾಂ' ಸಾಹಿತ್ಯ ವಿಮರ್ಶೆ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿವೆ.**

- ಸಾಹಿತ್ಯ ಅಕಾಡೆಮಿಯು 24 ಭಾಷೆಗಳಿಗೆ ವಾರ್ಷಿಕ ಪ್ರಶಸ್ತಿಯನ್ನು ಪ್ರಕಟಿಸಿದೆ, ಪ್ರಶಸ್ತಿಯು ₹1 ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಮಾರ್ಚ್ 31ರಂದು ನವದೆಹಲಿ ಯಲ್ಲಿ ನಡೆಯಲಿದೆ. ಕನ್ನಡದ ಆಯ್ಕೆ ಸಮಿತಿಯಲ್ಲಿ ಹಿರಿಯ ಸಾಹಿತಿ ಸಿದ್ದಲಿಂಗ ಪಟ್ಟಣಶೆಟ್ಟಿ, ಜಯಲಲಿತಾ ಹಾಗೂ ಸಹನಾ ಕಾಂತಬೈಲು ಇದ್ದರು.




## ❖ ಮಂಗಳೂರಿಗೆ ಬರಲಿದೆ ಎಲ್‌ಪಿಜಿ ಹೊತ್ತ 'ಶಿವಾಲಿಕ್'

**ಸಂದರ್ಭ: ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತ ಶಿವಾಲಿಕ್ ಹಡಗು, ಹೊರ್ಮುಜ್ ಜಲಸಂಧಿಯ ಮೂಲಕ ಸಾಗಿ ಬಂದಿದ್ದು, ಗುಜರಾತಿನ ಮುಂದ್ರಾ ಬಂದರನ್ನು ಸೋಮವಾರ ತಲುಪಿದೆ. ಆ ಹಡಗು ಭಾಗಶಃ ಎಲ್‌ಪಿಜಿಯನ್ನು ಮುಂದ್ರಾ ಬಂದರಿನಲ್ಲಿ ಇಳಿಸಿ, ಸುಮಾರು 26 ಸಾವಿರ ಟನ್ ಎಲ್‌ಪಿಜಿಯೊಂದಿಗೆ ಇಲ್ಲಿನ ನವಮಂಗಳೂರು ಬಂದರಿಗೆ ಬರಲಿದೆ.**

- 'ಶಿವಾಲಿಕ್ ಹಡಗು ಇಂಡಿಯನ್ ಆಯಿಲ್ ಕಾರ್ಪೊರೇಷನ್ನ ಎಲ್‌ಪಿಜಿ ಯನ್ನು ಸಾಗಿಸುತ್ತಿದೆ. 46 ಸಾವಿರ ಟನ್ ಎಲ್‌ಪಿಜಿ ಹೊತ್ತ ಈ ಹಡಗು ಮುಂದ್ರಾ ಬಂದರಿನಲ್ಲಿ, 20 ಸಾವಿರ ಟನ್ ಎಲ್‌ಪಿಜಿಯನ್ನು ಇಳಿಸಲಿದೆ' ಎಂದು ಮೂಲಗಳು ತಿಳಿಸಿವೆ.
- 'ಗುಜರಾತ್‌ನ ಮುಂದ್ರಾ ಬಂದರಿ ನಲ್ಲಿ 20 ಸಾವಿರ ಟನ್ ಎಲ್‌ಪಿಜಿಯನ್ನು ಖಾಲಿ ಮಾಡಲು ಕನಿಷ್ಠ, ಒಂದು ದಿನವಾದರೂ ಬೇಕು. ಅಲ್ಲಿಂದ ಹಡಗು ನವಮಂಗಳೂರು ಬಂದರನ್ನು ತಲುಪಲು ಮೂರು-ನಾಲ್ಕು ದಿನಗಳಾದರೂ ಬೇಕು' ಎಂದು ನವಮಂಗಳೂರು ಬಂದರು ಪ್ರಾಧಿಕಾರದ ಮೂಲಗಳು ತಿಳಿಸಿವೆ.

## ಇಂಧನ ಭದ್ರತೆ

# ಅತಿ ಅವಲಂಬನೆ ಸೃಷ್ಟಿಸಿದ ಬಿಕ್ಕಟ್ಟು

### ಇರಾನ್ ಯುದ್ಧದಿಂದ ಭಾರತದಲ್ಲಿ ಎಲ್‌ಪಿಜಿ, ಎಲ್‌ಎನ್‌ಜಿ ಕೊರತೆ; ದಾಸ್ತಾನು ವ್ಯವಸ್ಥೆ ಅಲಭ್ಯ



46 ಸಾವಿರ ಟನ್ ಎಲ್‌ಪಿಜಿ ಹೊತ್ತ ಶಿವಾಲಿಕ್ ಹಡಗು ಹೊರ್ಮುಜ್ ಜಲಸಂಧಿ ದಾಟಿ ಸೋಮವಾರ ಗುಜರಾತ್‌ನ ಮುಂದ್ರಾ ಬಂದರು ತಲುಪಿತು

**ಅಮೆರಿಕ–ಇಸ್ರೇಲ್ ಜೊತೆಯಾಗಿ ಇರಾನ್ ವಿರುದ್ಧ ಸಾರಿರುವ ಯುದ್ಧದಿಂದಾಗಿ ಭಾರತದಲ್ಲಿ ಅಡುಗೆ ಅನಿಲ (ಎಲ್‌ಪಿಜಿ) ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಪೂರೈಕೆ ವ್ಯವಸ್ಥೆಯಲ್ಲಿ ಗೊಂದಲ ಮೂಡಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಿಂದ ಹಲವು ಹೋಟೆಲ್‌ಗಳು ಬಂದ್ ಆಗಿವೆ. ರಸಗೊಬ್ಬರ ತಯಾರಿಕಾ ಘಟಕಗಳು ಸ್ಥಗಿತಗೊಂಡಿವೆ. ಸ್ಮಶಾನಗಳಲ್ಲಿ ಶವದಹನಕ್ಕೂ ಅಡ್ಡಿಯುಂಟಾಗಿದೆ. ಭಾರತವು ಎಲ್‌ಪಿಜಿ ಮತ್ತು ಎಲ್‌ಎನ್‌ಜಿಗಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳನ್ನೇ ಹೆಚ್ಚಾಗಿ ಅವಲಂಬಿಸಿರುವುದು ಮತ್ತು ಅದರ ದಾಸ್ತಾನಿಗೆ ಸೂಕ್ತ ಕ್ರಮ ಕೈಗೊಳ್ಳದೇ ಇರುವುದು ಭಾರತಕ್ಕೆ ಸಂಕಷ್ಟ ತಂದೊಡ್ಡಿದೆ. ಎರಡು ವಾರಗಳಿಂದ ನಡೆಯುತ್ತಿರುವ ಯುದ್ಧವು ಇಂಧನ ಭದ್ರತೆ ವಿಚಾರದಲ್ಲಿ ಭಾರತದ ದೌರ್ಬಲ್ಯವನ್ನು ಬಹಿರಂಗಪಡಿಸಿದೆ. ದೇಶದ ಆರ್ಥಿಕತೆಗೂ ಇದರಿಂದ ಪೆಟ್ಟು ಬೀಳುವ ಸಂಭವ ಇದೆ. ಕೇಂದ್ರ ಸರ್ಕಾರವು ಪರ್ಯಾಯ ಇಂಧನಗಳ ಬಗ್ಗೆ ಯೋಚಿಸುವ ಸಮಯ ಇದಾಗಿದೆ**

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಮೊದಲು ಅಡುಗೆ ತಯಾರಿಸಲು ಉರುವಲು, ಸೀಮೆಎಣ್ಣೆ, ಇದ್ದಿಲು, ಸೆಗಣಿ–ಬೆರಣಿ ಇತ್ಯಾದಿಗಳನ್ನು ಹೆಚ್ಚಾಗಿ ಬಳಸಲಾಗುತ್ತಿತ್ತು. ಕೈಗಾರಿಕೆಗಳಲ್ಲಿ ಕಲ್ಲಿದಲ್ಲಿನ ಬಳಕೆ ಹೆಚ್ಚಿತ್ತು. ಆದರೆ, ಗೃಹಿಣಿಯರ ಆರೋಗ್ಯ ರಕ್ಷಣೆ, ಪರಿಸರ ಮಾಲಿನ್ಯ ತಡೆಯುವುದು ಇತ್ಯಾದಿ ಕಾರಣಗಳಿಂದ ಸರ್ಕಾರಗಳು ಜನರನ್ನು ಅಡುಗೆ ಅನಿಲ (ಎಲ್‌ಪಿಜಿ) ಮತ್ತು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಬಳಸುವಂತೆ ಪ್ರೇರೇಪಿಸಿದವು. ಸರ್ಕಾರ ಸಬ್ಸಿಡಿ ನೀಡಿ ಎಲ್‌ಪಿಜಿ ಬಳಕೆಯನ್ನು ಪ್ರೋತ್ಸಾಹಿಸಿತು. ಒಂದು ಕಾಲದಲ್ಲಿ ಕೆಲವರ ಮನೆಗಳಲ್ಲಿ ಮಾತ್ರವೇ ಕಾಣಸಿಗುತ್ತಿದ್ದ ಎಲ್‌ಪಿಜಿ ಸಿಲಿಂಡರ್‌ಗಳು ಬರಬರುತ್ತಾ ಪ್ರತಿ ಕುಟುಂಬದ ಅಗತ್ಯ ಎನ್ನುವಷ್ಟರ ಮಟ್ಟಿಗೆ ಸರ್ವವ್ಯಾಪಿಯಾದವು.

ವಾಹನಗಳು, ವಿವಿಧ ಉದ್ಯಮಗಳಲ್ಲಿ ಎಲ್‌ಎನ್‌ಜಿ ಬಳಸಲಾಗುತ್ತಿದೆ. ಜನ ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಬಳಸುವುದು ಹೆಚ್ಚಾದಂತೆ ಭಾರತದ ಪಶ್ಚಿಮ ಏಷ್ಯಾ ರಾಷ್ಟ್ರಗಳ ಮೇಲಿನ ಅವಲಂಬನೆ ಹೆಚ್ಚಾಯಿತು. ಭಾರತದ ಎಲ್‌ಪಿಜಿ ಬಳಕೆಯ ಶೇ 65ರಷ್ಟನ್ನು ಬೃಹತ್ ಹಡಗುಗಳಲ್ಲಿ ಆಮದು ಮಾಡಿಕೊಳ್ಳಲಾಗುತ್ತಿದೆ ಮತ್ತು ಈ ಪೈಕಿ ಶೇ 90ರಷ್ಟು ಹೊರ್ಮುಜ್ ಜಲಸಂಧಿಯ ಮೂಲಕವೇ ಸಾಗಣೆಯಾಗುತ್ತಿದೆ. ದೇಶದಲ್ಲಿ ತುರ್ತು ಸಂದರ್ಭದಲ್ಲಿ ಕನಿಷ್ಠ ಎರಡು ತಿಂಗಳಿಗೆ ಬೇಕಾಗುವಷ್ಟು ತೈಲ ಸಂಗ್ರಹಿಸುವ ವ್ಯವಸ್ಥೆ ಇದೆ. ಆದರೆ, ಎಲ್‌ಪಿಜಿ, ನೈಸರ್ಗಿಕ ಅನಿಲ ಸಂಗ್ರಹಿಸುವ ವ್ಯವಸ್ಥೆ ಇಲ್ಲ. ಕ್ರಮವಾಗಿ 25 ಮತ್ತು 10 ದಿನಗಳಿಗೆ ಆಗುವಷ್ಟೇ ಎಲ್‌ಪಿಜಿ, ಎಲ್‌ಎನ್‌ಜಿ ದಾಸ್ತಾನು ಇದೆ. ಎಲ್‌ಪಿಜಿಯನ್ನು ತೈಲದಂತೆ ನೆಲದಡಿಯಲ್ಲಿ ಸಂಗ್ರಹಿಸಲು ಆಗುವುದಿಲ್ಲ. ಅದಕ್ಕೆ ವಿಶೇಷ ವಾತಾನುಕೂಲ ವ್ಯವಸ್ಥೆ ಇರುವ ಟ್ಯಾಂಕ್‌ಗಳು ಬೇಕಾಗುತ್ತವೆ. ಅಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲದಿರುವುದು ಬಿಕ್ಕಟ್ಟಿಗೆ ಕಾರಣ.


ಇರಾನ್ ಯುದ್ಧವು ಭಾರತದಲ್ಲಿ ಅಡುಗೆ ಮನೆಯಿಂದ ಹಿಡಿದು ಹೋಟೆಲ್‌ಗಳು, ಕೈಗಾರಿಕೆಗಳು, ಕೃಷಿ, ಸ್ಮಶಾನ ಸೇರಿ ಹಲವು ವಲಯಗಳ ಮೇಲೆ ಪರಿಣಾಮ ಬೀರಿದೆ. ಪುಣೆಯಲ್ಲಿ ಎಲ್‌ಪಿಜಿ ಆಧಾರಿತವಾಗಿ ಶವದಹನ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಎಲ್‌ಎನ್‌ಜಿ ಬಳಕೆಗೆ ಸಂಬಂಧಪಟ್ಟಂತೆಯೂ ಇದೇ ರೀತಿಯ ಸ್ಥಿತಿ ಇದೆ. ಭಾರತಕ್ಕೆ ಅತಿ ಹೆಚ್ಚು (ಶೇ 30ರಷ್ಟು) ಎಲ್‌ಎನ್‌ಜಿ ಕತಾರ್‌ನಿಂದ ಆಮದಾಗುತ್ತಿದೆ. ಈಗ ಅದಕ್ಕೆ ಅಡ್ಡಿಯುಂಟಾಗಿದೆ. ಮಾರ್ಚ್ 9ರಂದು ಕೇಂದ್ರ ಸರ್ಕಾರವು ಎಲ್‌ಎನ್‌ಜಿ ಬಳಕೆಗೆ ಸಂಬಂಧಿಸಿದಂತೆ ಆದೇಶವೊಂದನ್ನು ಹೊರಡಿಸಿದೆ. ಅದರ ಪ್ರಕಾರ, ಉದ್ಯಮ ವಲಯಕ್ಕೆ ಪೂರೈಸಲಾಗುತ್ತಿದ್ದ ಎಲ್‌ಎನ್‌ಜಿಯಲ್ಲಿ ಶೇ 20ರಷ್ಟು ಕಡಿತ ಮಾಡಲಾಗಿದೆ. ರಾಸಾಯನಿಕ ಗೊಬ್ಬರ ಕ್ಷೇತ್ರಕ್ಕೆ ನೀಡಲಾಗುತ್ತಿದ್ದ ಎಲ್‌ಎನ್‌ಜಿಯಲ್ಲಿ ಶೇ 30ರಷ್ಟು ಕಡಿತ, ಸಂಸ್ಕರಣ ಘಟಕಗಳು ಮತ್ತು ಪೆಟ್ರೋಕೆಮಿಕಲ್ ಕ್ಷೇತ್ರದಲ್ಲಿ ಶೇ 35ರಷ್ಟು ಕಡಿತ ಮಾಡಲಾಗಿದೆ ಎಂದು ಆದೇಶ ಹೇಳಿದೆ.


ಎಲ್‌ಎನ್‌ಜಿ ಕೊರತೆಯಿಂದ ಕೃಷಿಯಲ್ಲಿ ವ್ಯಾಪಕವಾಗಿ ಬಳಸುವ ಯೂರಿಯಾ ತಯಾರಿಕೆಗೆ ಹೊಡೆತ ಬಿದ್ದಿದೆ. ಮುಂಗಾರು ಸಮೀಪಿಸುತ್ತಿದ್ದು, ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಕೃಷಿ ಕ್ಷೇತ್ರದ ಮೇಲೆ ತೀವ್ರ ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

ವಾಹನಗಳು, ಇನ್ನಿತರ ಉದ್ದೇಶಗಳಿಗೂ ಎಲ್‌ಎನ್‌ಜಿ ಪೂರೈಸಲಾಗುವುದು ಎಂದು ಸರ್ಕಾರ ಹೇಳಿದ್ದರೂ ಸಮಸ್ಯೆ ಉಂಟಾಗಿದೆ. ಅನಿಲ ಕೊರತೆಯು ಜನರ ಬದುಕು, ಉದ್ಯಮಗಳ ಜತೆಗೆ ದೇಶದ ಆರ್ಥಿಕತೆಯ ಮೇಲೂ ಪರಿಣಾಮ ಬೀರುವ ಸಂಭವ ಇದೆ. ಪ್ರಸ್ತುತ ತೈಲದ ಸಮಸ್ಯೆ ಇಲ್ಲವಾದರೂ ಯುದ್ಧ ಮುಂದುವರಿದರೆ, ಕೊರತೆ ಉಂಟಾಗುವ ಸಾಧ್ಯತೆ ತಳ್ಳಿ ಹಾಕಲಾಗದು.

ಭಾರತವು ಹೆಚ್ಚು ಹೆಚ್ಚು ಅನಿಲ ಆಧಾರಿತ ಆರ್ಥಿಕತೆಯಾಗುತ್ತಿದ್ದು, ಅದಕ್ಕಾಗಿ ಎಲ್‌ಎನ್‌ಜಿಯನ್ನೇ ಅವಲಂಬಿಸಿದೆ. ಬಳಕೆಗೆ ಅಗತ್ಯವಿರುವ ಅರ್ಧದಷ್ಟು ಅನಿಲವನ್ನು ಭಾರತ ಉತ್ಪಾದಿಸುತ್ತಿದ್ದರೂ ಇನ್ನರ್ಧಕ್ಕೆ ಹೊರ ದೇಶಗಳನ್ನು ಅವಲಂಬಿಸಿದೆ. ಕೇಂದ್ರ ಸರ್ಕಾರ ಭಾರಿ ಪ್ರಮಾಣದಲ್ಲಿ ಟರ್ಮಿನಲ್ ಸಾಮರ್ಥ್ಯ ವಿಸ್ತರಣೆ ಮತ್ತು ಅತಿದೊಡ್ಡ ಅನಿಲ ಪೈಪ್‌ಲೈನ್ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಈಗ ದೇಶದ ಆರ್ಥಿಕತೆಯು ಹೊರಳುಹಾದಿಯಲ್ಲಿದ್ದು, ಅದರಲ್ಲಿ ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ಪ್ರಮುಖ ಪಾತ್ರ ವಹಿಸಿವೆ. ದೇಶದಲ್ಲಿ ಹಸಿರು ಜಲಜನಕ ಆಧರಿಸಿದ ಪರ್ಯಾಯಗಳನ್ನು ರೂಪಿಸುವ ಕೆಲಸಗಳು ನಡೆಯುತ್ತಿವೆ. ಆದರೆ, ಅಷ್ಟರಲ್ಲಿಯೇ ಯುದ್ಧವು ಆರಂಭವಾಗಿದ್ದು, ಭಾರತವು ಅನಿಲಕ್ಕಾಗಿ ಹೊರದೇಶಗಳನ್ನು ವಿಶೇಷವಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳನ್ನು ಅತಿಯಾಗಿ ಅವಲಂಬಿಸಿರುವುದನ್ನು, ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಬಯಲು ಮಾಡಿದೆ.




ಆಧಾರ: ಪಿಟಿಐ, ರಾಯಿಟರ್ಸ್, ಪೆಟ್ರೋಲಿಯಂ ಪ್ಲಾನಿಂಗ್ ಆ್ಯಂಡ್ ಅನಾಲಿಸಿಸ್ ಸೆಲ್, ಮಾಧ್ಯಮ ವರದಿಗಳು

ಭಾರತವು ಇಂಧನ ಭದ್ರತೆಗಾಗಿ ಹೊರದೇಶಗಳ ಮೇಲೆ ಅತಿಯಾಗಿ ಅವಲಂಬಿಸುವುದನ್ನು ತಪ್ಪಿಸಲು ಹಲವು ಪರ್ಯಾಯ ಮಾರ್ಗಗಳತ್ತ ತುರ್ತಾಗಿ ಗಮನಹರಿಸಬೇಕಾದ ಅಗತ್ಯವಿದೆ ಎಂಬುದು ತಜ್ಞರ ಮಾತು.

#### ಪರ್ಯಾಯ ಮಾರ್ಗ ಏನು?

- ಎಲ್‌ಪಿಜಿ, ನೈಸರ್ಗಿಕ ಅನಿಲ ಮತ್ತು ಕಚ್ಚಾ ತೈಲಗಳಿಗಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳು ಸೇರಿದಂತೆ ಹೊರದೇಶಗಳ ಅವಲಂಬನೆಯನ್ನು ಕಡಿಮೆಗೊಳಿಸಲು ದೇಶದಲ್ಲೇ ಅವುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು. ಅದಕ್ಕಾಗಿ ನಿಕ್ಷೇಪಗಳ ಪತ್ತೆ, ಮೂಲಸೌಕರ್ಯಗಳ ನಿರ್ಮಾಣಕ್ಕೆ ಗಮನಹರಿಸಬೇಕು. ದೇಶದಲ್ಲಿ ತೈಲ ಮತ್ತು ಅನಿಲ ಉತ್ಪಾದನೆಗೆ ಉತ್ತೇಜನ ನೀಡಲು 2017ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಒಎಎಲ್‌ಪಿ (ದಿ ಓಪನ್ ಅಕ್ರೇಜ್ ಲೈಸೆನ್ಸಿಂಗ್ ಪಾಲಿಸಿ) ಇನ್ನಷ್ಟು ಪ್ರೋತ್ಸಾಹ ನೀಡಬೇಕು
- ಸೌರಶಕ್ತಿ ಉತ್ಪಾದನೆಯಲ್ಲಿ ದೇಶವು ಉತ್ತಮ ಸಾಧನೆ ಮಾಡುತ್ತಿದೆ. ಸೌರ ಕ್ಷೇತ್ರದಲ್ಲಿ ಇನ್ನಷ್ಟು ಹೂಡಿಕೆ ಮಾಡಿ ಪಳೆಯುಳಿಕೆ ಆಧಾರಿತ ಇಂಧನಗಳ ಬಳಕೆಯನ್ನು ತಗ್ಗಿಸಲು ಕ್ರಮ ವಹಿಸಬೇಕು
- ಪರಿಸರಸ್ನೇಹಿ ಜಲಜನಕ ಅನಿಲದ ಉತ್ಪಾದನೆಗೆ ಉತ್ತೇಜನ ನೀಡುವುದು
- ಕಲ್ಲಿದ್ದಲಿನ ಪದರಗಳ ನಡುವಿನ ಸಂದಿಯಲ್ಲಿ ಲಭ್ಯವಿರುವ ನೈಸರ್ಗಿಕವಾದ ಸಿಬಿಎಂ (ಕೋಲ್ ಬೆಡ್ ಮಿಥೇನ್) ಅನ್ನು ಸಂಗ್ರಹಿಸಲು ಕ್ರಮಕೈಗೊಳ್ಳುವುದು
- ಕಲ್ಲಿದ್ದಲು, ತ್ಯಾಜಗಳನ್ನು ಅನಿಲೀಕರಣಗೊಳಿಸುವ ಮೂಲಕ ಉತ್ಪಾದಿಸುವ ಸಿನ್‌ಗ್ಯಾಸ್ ಉತ್ಪಾದನೆಗೆ ಉತ್ತೇಜನ ನೀಡುವುದು
- ಕೃಷಿ ತ್ಯಾಜ್ಯ, ಸಗಣಿ, ನಗರ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಬಳಸಿಕೊಂಡು ಉತ್ಪಾದಿಸಬಹುದಾದ ಸಂಪೀಡಿತ ಜೈವಿಕ ಅನಿಲ (ಸಿಬಿಜಿ) ಉತ್ಪಾದನೆಗೆ ಪ್ರೋತ್ಸಾಹ ಕೊಡುವುದು
- ಈಗ ಉದ್ಭವವಾಗಿರುವಂತಹ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಕಚ್ಚಾ ತೈಲದ ಸಂಗ್ರಹಾಗಾರದ ಮಾದರಿಯಲ್ಲಿ ಎಲ್‌ಪಿಜಿ, ನೈಸರ್ಗಿಕ ಅನಿಲವನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿಡುವ ವ್ಯವಸ್ಥೆಯ ಅಗತ್ಯವಿದೆ
- ಪೆಟ್ರೋಲ್‌ಗೆ ಎಥೆನಾಲ್ ಬೆರೆಸುವ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವುದು (ಸದ್ಯ ಶೇ 20ರಷ್ಟು ಇದೆ). ಈ ಪ್ರಕ್ರಿಯೆಯು ಅತ್ಯಂತ ವೈಜ್ಞಾನಿಕವಾಗಿ ನಡೆಯಬೇಕು

#### ಪದಬಂ

**ಎಡದಿಂದ ಬಲಕ್ಕೆ**

1.ಕೊನೆಗೆ ವಿಕ್ರಯಿಸಿ ಎಂದಿದ್ದಕ್ಕೇ ಈ ಹೊಡೆದಾಟ! (4)
3.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು (4)
5.ಒಣಗಿದ ಸಣ್ಣ ಕಟ್ಟಿಗೆ (3)
6.ಹೀಗೆ ಭ್ರಾಂತಿಗೆ ಒಳಗಾಗು (3)
7.ಆಡಂಬರ ಈ ರೀತಿ ಕಾಣುತ್ತಿದೆ (2)
8.ವಾರಕ್ಕೆ ಮೊದಲೇ ಬಂದಿರುವ ಬಾಧ್ಯಸ್ಥ (5)
11.ಪಿನಾಕದ ಬಳಿಯಿರುವ ಗಿಳಿ (2)
13.ನೃತ್ಯವನ್ನು ಹೀಗೆ ಹೇಳಿ (3)
14.ಗಣಪತಿ ಚಿಕ್ಕದಾಗಿ ಬಂದಿದೆ (3)
15.ಕನ್ನಡಿಗನಿಗೆ ಸಿಕ್ಕಿರುವ ರಿಬೇಟ್ (4)
16.ದೇವರನ್ನು ರಥದಲ್ಲಿ ಕೂರಿಸಿ ಮಾಡುವ

**ಮೇಲಿಂದ ಕೆಳಕ್ಕೆ**

1.ಮರ್ಯಾದೆಯೊಡನಿರುವ ಅಳತೆಗೋಲು
2.ಶತ್ರುಗಳನ್ನು ಕೊಲ್ಲುವುದು
3.ಅಬಲೆಗೆ ಕಾಣಿಸಿದ ನೀರಿನ ತೆರೆ
4.ಕಾಡಿನ ಹೂವಿದು
6.ಮರದ ಹತ್ತಿರವಿರುವ ದುಂಬಿ
8.ವಾದ್ಯವನ್ನು ನುಡಿಸುವುದು
9.ಸಂಕೋಚವುಳ್ಳವನು ದಾರದಲ್ಲಿ ಬಂದಿಹನಲ್ಲಾ?
10.ಈಕೆ ಬೇಡತಿ
12.ಮಧುರವಾದ ಧ್ವನಿ
14.ಗಣತಿಯಲ್ಲೇ ಅವಸ್ಥೆ ಬಂದಿದೆ

## ❖ ದಯಾಮರಣ: ಸಿದ್ಧರಾದ ಹರೀಶ್

**ಸಂದರ್ಭ: ದೇಶದಲ್ಲಿ ಮೊದಲ ಬಾರಿಗೆ ಪರೋಕ್ಷ ದಯಾಮರಣಕ್ಕೆ ಸುಪ್ರೀಂ ಕೋರ್ಟ್‌ನಿಂದ ಅವಕಾಶ ಪಡೆದ ಹರೀಶ್ ರಾಣಾ ಅವರು ಸೋಮವಾರ ದೆಹಲಿಯ ಏಮ್ಸ್ ಆಸ್ಪತ್ರೆಗೆ ತೆರಳಿದರು.**

- 12 ವರ್ಷದಿಂದಲೂ ಕೋಮಾದಲ್ಲಿದ್ದ 32 ವರ್ಷದ ಯುವಕ ಹರೀಶ್ ಅವರ ಮನೆಯಲ್ಲಿ ಧ್ಯಾನದ ನಂತರ ಘೋಷಗಳು ಮೊಳಗಿದವು ಪ್ರೀತಿಪಾತ್ರರು ಹಣೆ ಮೇಲೆ ಕೈ ಇಟ್ಟು ವಿದಾಯದ ನುಡಿಗಳನ್ನಾಡಿ ಗಾಜಿಯಾಬಾದ್‌ನ ಮನೆಯಿಂದ ದೆಹಲಿಯ ಏಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಅಲ್ಲಿ ಹರೀಶ್ ದಯಾಮರಣ ಪಡೆಯಲಿದ್ದಾರೆ.
- ದಯಾಮರಣದ ಕುರಿತು ಕಳೆದ ವಾರ ಮಹತ್ವದ ತೀರ್ಪನ್ನು ನೀಡಿದ್ದ ಸುಪ್ರೀಂ ಕೋರ್ಟ್, 'ಹರೀಶ್ ಗೆ ನೀಡುತ್ತಿದ್ದ ಜೀವರಕ್ಷಕ ವ್ಯವಸ್ಥೆಯನ್ನು ಮಾನವೀಯ ರೀತಿಯಲ್ಲಿ ಹಿಂಪಡೆಯಬೇಕು. ಗೌರವಯುತವಾಗಿ ಜೀವ ಬಿಡಲು ಅವಕಾಶ ಕಲ್ಪಿಸಬೇಕು' ಎಂದು ದೆಹಲಿಯ ಏಮ್ಸ್‌ಗೆ ನಿರ್ದೇಶನ ನೀಡಿತ್ತು.
- ದಯಾಮರಣ ಪ್ರಕ್ರಿಯೆ ಯಾವಾಗ ಮತ್ತು ಹೇಗೆ ನಡೆಯಲಿದೆ ಎಂಬ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಹರೀಶ್ ಮನೆಯಲ್ಲಿ ಸಂಬಂಧಿಕರು ಪ್ರಾರ್ಥನೆ ಮಾಡುತ್ತಿರುವ ಮತ್ತು ಬ್ರಹ್ಮಕುಮಾರಿಗಳು ಹರೀಶ್ ತಲೆಗೆ ತಿಲಕವನ್ನಿಟ್ಟು, 'ಎಲ್ಲರನ್ನೂ ಕ್ಷಮಿಸು ಮತ್ತು ಎಲ್ಲರಿಂದ ಕ್ಷಮೆಯಾಚಿಸು ಈಗ ಮಲಗು" ಎಂದು ಹೇಳಿದ ವಿಡಿಯೊ ಹರಿದಾಡುತ್ತಿದೆ.

## ❖ 'ಹೊರ್ಮುಜ್ ನಿಯಂತ್ರಿಸಲು ಒಕ್ಕೂಟ'

**ಸಂದರ್ಭ: ಹೊರ್ಮುಜ್ ಜಲಸಂಧಿಯನ್ನು ಮುಕ್ತವಾಗಿರಿಸಲು ಎಳು ದೇಶಗಳು ಯುದ್ಧನೌಕೆಗಳನ್ನು ಕಳುಹಿಸಬೇಕೆಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮನವಿಗೆ ಯಾವುದೇ ದೇಶಗಳಿಂದ ಸಮ್ಮತಿ ಸಿಕ್ಕಿಲ್ಲ.**


- ಜಗತ್ತಿನ ಐದನೇ ಒಂದು ಭಾಗದಷ್ಟು ತೈಲವನ್ನು ಸಾಗಿಸುವ ಈ ಜಲಮಾರ್ಗವನ್ನು ನಿಯಂತ್ರಿಸಲು ಒಕ್ಕೂಟವೊಂದನ್ನು ರಚಿಸುವ ಬಗ್ಗೆ ಅಮೆರಿಕವು ವಿವಿಧ ದೇಶಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಆದರೆ, ಮಧ್ಯಪ್ರಾಚ್ಯದ ಕಚ್ಚಾ ತೈಲದ ಮೇಲೆ ಹೆಚ್ಚು ಅವಲಂಬಿತವಾಗಿರುವ ದೇಶಗಳ ಹೆಸರನ್ನು ತಿಳಿಸಲು ಟ್ರಂಪ್ ನಿರಾಕರಿಸಿದ್ದಾರೆ.
- 'ಈ ದೇಶಗಳು ತಮ್ಮ ಸ್ವಂತ ಪ್ರದೇಶವನ್ನು ರಕ್ಷಿಸಿಕೊಳ್ಳಬೇಕು. ಏಕೆಂದರೆ, ಅದು ಅವರ ಸ್ವಂತ ಪ್ರದೇಶವಾಗಿದೆ. ತೈಲ ಸಾಗಣೆಗೆ ಬೇರೆಯದೇ ಮಾರ್ಗ ಇರುವುದರಿಂದ ಈ ಜಲಮಾರ್ಗವು ಅಮೆರಿಕಕ್ಕೆ ಅಗತ್ಯವಿಲ್ಲ' ಎಂದು ಟ್ರಂಪ್ ಅವರು ಫ್ಲಾರಿಡಾದಿಂದ ವಾಷಿಂಗ್ಟನ್‌ಗೆ ಹಿಂತಿರುಗುವಾಗ ವರದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ.
- 'ಚೀನಾ ತನ್ನ ತೈಲದ ಶೇ 90ರಷ್ಟು ಪ್ರಮಾಣವನ್ನು ಈ ಜಲಸಂಧಿ ಮೂಲಕ ಪಡೆಯುತ್ತದೆ. ಆದರೆ, ಅಮೆರಿಕ ಕಡಿಮೆ ತೈಲವನ್ನು ಪಡೆಯುತ್ತದೆ' ಎಂದು ಟ್ರಂಪ್ ಹೇಳಿದ್ದಾರೆ ಆದರೆ, ಒಕ್ಕೂಟಕ್ಕೆ ಚೀನಾ ಸೇರುತ್ತದೆಯೇ ಎಂಬುದರ ಕುರಿತು ಚರ್ಚಿಸಲು ಅವರು ನಿರಾಕರಿಸಿದ್ದಾರೆ
- 'ಜಲಸಂಧಿಯನ್ನು ಮತ್ತೆ ತೆರೆಯುವ ಮಹತ್ವದ ಕುರಿತು ಪ್ರಧಾನಿ ಕಿಯರ್ ಸ್ಟಾರ್ಮರ್ ಭಾನುವಾರ ಟ್ರಂಪ್ ಅವರೊಂದಿಗೆ ಚರ್ಚಿಸಿದ್ದಾರೆ ಕೆನಡಾದ ಪ್ರಧಾನಿ ಅವರೊಂದಿಗೂ ಪ್ರತ್ಯೇಕವಾಗಿ ಮಾತನಾಡಿದ್ದಾರೆ' ಎಂದು ಬ್ರಿಟನ್ ಹೇಳಿದೆ.
- 'ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳನ್ನು ಹೊರತುಪಡಿಸಿ ಉಳಿದೆಲ್ಲ ದೇಶಗಳಿಗೂ ಜಲಸಂಧಿ ಮುಕ್ತವಾಗಿದೆ' ಎಂದು ಇರಾನ್ ಹೇಳಿದೆ.

Dr. Rajkumar IAS Academy

## ❖ ಅಮೆರಿಕ ಜೊತೆ ವ್ಯಾಪಾರ ಒಪ್ಪಂದ ಮುಂದಕ್ಕೆ

**ಸಂದರ್ಭ: ಭಾರತ ಮತ್ತು ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಹಿ ಬೀಳುವ ದಿನವನ್ನು ಮುಂದೂಡಲಾಗಿದೆ. ಅಮೆರಿಕವು ವಿವಿಧ ದೇಶಗಳ ಮೇಲೆ ವಿಧಿಸಲು ರೂಪಿಸುತ್ತಿರುವ ಹೊಸ ತೆರಿಗೆ ವ್ಯವಸ್ಥೆಯು ಅಂತಿಮ ರೂಪ ಪಡೆದ ನಂತರದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

- ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತದ ಚೌಕಟ್ಟು ಪೂರ್ಣಗೊಂಡಿದೆ ಎಂಬುದನ್ನು ಭಾರತ ಮತ್ತು ಅಮೆರಿಕ ಕಳೆದ ತಿಂಗಳು ಪ್ರಕಟಿಸಿದ್ದವು. ಇದರ ಅನ್ವಯ, ಭಾರತದ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಶೇ 18ಕ್ಕೆ ತಗ್ಗಿಸಲು ಅಮೆರಿಕ ಒಪ್ಪಿತ್ತು.
- ಆದರೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬೇರೆ ಬೇರೆ ದೇಶಗಳ ವಿರುದ್ಧ ವಿಧಿಸಿದ್ದ ಪ್ರತಿಸುಂಕದ ವಿಚಾರವಾಗಿ ಅಲ್ಲಿನ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿದ ನಂತರದಲ್ಲಿ ಅಮೆರಿಕದ ಸುಂಕ ವ್ಯವಸ್ಥೆ ಬದಲಾಗಿದೆ. ತೀರ್ಪಿನ ನಂತರ ಟ್ರಂಪ್ ಅವರು ಎಲ್ಲ ದೇಶಗಳ ಉತ್ಪನ್ನಗಳ ಮೇಲೆ ಶೇ 10ರಷ್ಟು ಸುಂಕ ಜಾರಿಗೊಳಿಸಿದ್ದಾರೆ. ಇದು ಫೆಬ್ರುವರಿ 24ರಿಂದ 150 ದಿನ ಜಾರಿಯಲ್ಲಿರುತ್ತದೆ.
- 'ಒಪ್ಪಂದಕ್ಕೆ ಮಾರ್ಚ್‌ನಲ್ಲಿ ಸಹಿ ಹಾಕಬೇಕಿತ್ತು. ಆದರೆ ಸಹಿ ಹಾಕುವ ಸಮಯದ ಬಗ್ಗೆ ತೀರ್ಮಾನ ಆದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಬಂದಿರಲಿಲ್ಲ. ಈಗ ಕೋರ್ಟ್ ತೀರ್ಪಿನಿಂದಾಗಿ, ಆಗ ಜಾರಿಗೆ ಬಂದಿದ್ದ ಸುಂಕ ಅಸ್ತಿತ್ವದಲ್ಲಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

## ❖ ದೊಡ್ಡ ಮಗುವಿನ ದತ್ತು ಪಡೆದರೂ ತಾಯ್ತನ ರಜೆ: ಸುಪ್ರೀಂ ಕೋರ್ಟ್

**ಸಂದರ್ಭ: ದತ್ತು ಸ್ವೀಕರಿಸಿದ ಮಗು ಜೈವಿಕ ಮಗುವಿಗಿಂತ ಭಿನ್ನವಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್ ಮೂರು ತಿಂಗಳಿಗೂ ಕಡಿಮೆ ವಯಸ್ಸಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆ ಮಾತ್ರ ತಾಯ್ತನ ರಜೆಗೆ ಅರ್ಹರಾಗುತ್ತಾರೆ ಎಂಬ ಕಾನೂನನ್ನು ರದ್ದುಗೊಳಿಸಿದೆ.**

- 'ಮಗುವನ್ನು ಕಾನೂನುಬದ್ಧವಾಗಿ ದತ್ತು ಪಡೆದುಕೊಂಡ ಮಹಿಳೆಯು ಮಗುವಿನ ವಯಸ್ಸನ್ನು ಪರಿಗಣಿಸದೆ 12 ವಾರಗಳ ಮಾತೃತ್ವ ರಜೆಗೆ ಅರ್ಹರಾಗಿರುವರು' ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್.ಮಹಾದೇವನ್ ಅವರ ಪೀಠ ತೀರ್ಪು ನೀಡಿದೆ.
- ಸಾಮಾಜಿಕ ಭದ್ರತೆ ಸಂಹಿತೆ-2020ರ ಸೆಕ್ಷನ್ 60(4)ರ ಅಡಿಯಲ್ಲಿ ವಯಸ್ಸಿನ ಆಧಾರದ ವರ್ಗೀಕರಣವು ಸಂವಿಧಾನದ 14 ಮತ್ತು 21ನೇ ವಿಧಿಗಳ ಉಲ್ಲಂಘನೆ ಯಾಗಿದೆ ಎಂದು ಹೇಳಿದ ಪೀಠ, 'ಈಗ ಇರುವ ಕಾನೂನು ತಾರತಮ್ಯದಿಂದ ಕೂಡಿದೆ' ಎಂದಿತು. 3 ತಿಂಗಳಿಗೂ ಕಡಿಮೆ ವಯೋಮಾನದ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆ ಮಾತ್ರ ತಾಯ್ತನದ ರಜೆ ತೆಗೆದು ಕೊಳ್ಳಲು ಅರ್ಹ ಎಂಬ ನಿಬಂಧನೆಯನ್ನು ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.
- ಇಬ್ಬರು ಮಕ್ಕಳನ್ನು ದತ್ತು ಪಡೆದಿರುವ ವಕೀಲರಾದ ಹಂಸನಂದಿನಿ ನಂದೂರಿ ಅವರು ಈ ಅರ್ಜಿ ಸಲ್ಲಿಸಿದ್ದರು.
- 'ಮಗುವಿನ ವಯಸ್ಸನ್ನು ಮಾತ್ರ ಗಮನದಲ್ಲಿಟ್ಟುಕೊಂಡು ತಾಯ್ತನ ಸೌಲಭ್ಯವನ್ನು ಸೀಮಿತಗೊಳಿಸಲು ಆಗದು. ಜೈವಿಕ ತಾಯಿಗೆ ಇರುವ ಹಕ್ಕುಗಳು ಮತ್ತು ಬಾಧ್ಯತೆಗಳು ದತ್ತು ಪಡೆದ ಮಗುವಿನ ತಾಯಿಗೂ ಇರುತ್ತವೆ' ಎಂದು 100 ಪುಟಗಳ ತೀರ್ಪಿನಲ್ಲಿ ಪೀಠ ಹೇಳಿದೆ.
- ಮೂರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆಯರನ್ನು ಮೂರು ತಿಂಗಳೊಳಗಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆಯರಿಗೆ ಸಮಾನರಾಗಿ ಕಾಣಬೇಕು ಎಂದಿದೆ.

**ಪೀಠ ಹೇಳಿದ್ದು**

- ತಾಯ್ತನದ ಸೌಲಭ್ಯದ ಉದ್ದೇಶವು ಹೆರಿಗೆಯ ಪ್ರಕ್ರಿಯೆಯೊಂದಿಗೆ ಸಂಬಂಧ ಹೊಂದಿಲ್ಲ. ಅದು ತಾಯ್ತನದ ಪ್ರಕ್ರಿಯೆಗೆ ಸಂಬಂಧಿಸಿದ್ದಾಗಿದೆ
- ದತ್ತು ಸ್ವೀಕಾರ ಪ್ರಕ್ರಿಯೆಯು ಮಗು ಮತ್ತು ದತ್ತು ಪಡೆದ ತಾಯಿ ಇಬ್ಬರ ನಡುವಿನ ಭಾವನಾತ್ಮಕ, ಮಾನಸಿಕ ಮತ್ತು ಪ್ರಾಯೋಗಿಕ ಹೊಂದಾಣಿಕೆಗಳನ್ನು ಒಳಗೊಂಡಿರುತ್ತದೆ
- ಯಾವುದೇ ವಯಸ್ಸಿನಲ್ಲಿ ದತ್ತು ಪಡೆದ ಮಗು ಹೊಸ ಕೌಟುಂಬಿಕ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದರೆ ನಿರಂತರ ಆರೈಕೆ ಮತ್ತು ಪೋಷಕರ ಉಪಸ್ಥಿತಿಯ ಅಗತ್ಯವಿರುತ್ತದೆ
- ಮಾತೃತ್ವ ರಜೆಯ ರಕ್ಷಣೆಯು ಪ್ರಮುಖ ಮಾನವೀಯ ಹಕ್ಕು ಏಕೆಂದರೆ, ಇದು ಮಾನವ ವ್ಯಕ್ತಿತ್ವದ ಪೂರ್ಣ ಬೆಳವಣಿಗೆ ಮತ್ತು ಸಮಾನತೆಯ ಸಾಕ್ಷಾತ್ಕಾರಕ್ಕೆ ಅಗತ್ಯವಾದ ಪರಿಸ್ಥಿತಿಗಳನ್ನು ಗುರುತಿಸುತ್ತದೆ

## ❖ ಪಿತೃತ್ವ ರಜೆ: ಕಾನೂನು ರೂಪಿಸಲು ನಿರ್ದೇಶನ


**ಸಂದರ್ಭ: 'ಮಗುವಿನ ಪೋಷಣೆ, ಬೆಳವಣಿಗೆಯಲ್ಲಿ ತಾಯಿಯನ್ನು ಪ್ರಮುಖ ಪಾತ್ರವೇ ಆಗಿದ್ದರೂ, ತಂದೆಯ ಪಾತ್ರವನ್ನು ಕಡೆಗಣಿಸುವಂತಿಲ್ಲ ಕಡೆಗಣಿಸುವುದು ನ್ಯಾಯೋಚಿತವೂ ಅಲ್ಲ'ಎಂದಿರುವ ಸುಪ್ರೀಂ ಕೋರ್ಟ್,'ಪಿತೃತ್ವ ರಜೆಗೆ ಪೂರಕವಾದ ಕಾನೂನು ಜಾರಿಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.**

- 'ಮಕ್ಕಳ ಪೋಷಣೆಯು ಒಬ್ಬರಷ್ಟೇ ನಿರ್ವಹಿಸುವಂತಹದಲ್ಲ. ಹೀಗಾಗಿ ಪಿತೃತ್ವ ರಜೆಯನ್ನು ಸಾಮಾಜಿಕ ಭದ್ರತಾ ಸೌಲಭ್ಯ ಎಂದು ಪರಿಗಣಿಸುವಂತಹ ಕಾನೂನು ಜಾರಿಗೆ ತರಬೇಕು' ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.



Dr. Rajkumar IAS/KAS Academy

- ಲಿಂಗ ಸಮಾನತೆ ಉತ್ತೇಜಿಸುತ್ತದೆ' 'ಪಿತೃತ್ವ ರಜೆಯು, ಮಕ್ಕಳ ಪೋಷಣೆ ಮತ್ತು ಆರೈಕೆಯಲ್ಲಿ ತಂದೆಯು ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತದೆ ಜತೆಗೆ ಪೋಷಕರ ಬಗ್ಗೆ ಸಮಾನ ರೀತಿಯ ತಿಳಿವಳಿಕೆ ಬೆಳೆಸುತ್ತದೆ. ಅಲ್ಲದೆ ಇದು, ಮನೆ ಮತ್ತು ಕೆಲಸದ ಸ್ಥಳದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುತ್ತದೆ' ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್ ಮಹಾದೇವನ್ ಅವರ ಪೀಠ ಒತ್ತಿ ಹೇಳಿದೆ.
- 'ಮಗುವಿನ ಭಾವನಾತ್ಮಕ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ತಾಯಿಯನ್ನು ಪ್ರಮುಖ ಪಾತ್ರ ಎಂಬುದರಲ್ಲಿ ಎರಡು ಮಾತಿಲ್ಲ ಆದರೆ ತಂದೆಯದ್ದೂ ಅಷ್ಟೇ ಮಹತ್ವದ ಪಾತ್ರ ಅದನ್ನು ಕಡೆಗಣಿಸುವುದು ಅನ್ಯಾಯ' ಎಂದು ಪೀಠ ತಿಳಿಸಿದೆ.
- 'ಪ್ರತಿ ಪೋಷಕರೂ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಕೊಡುಗೆ ನೀಡಬೇಕು. ಈ ನಿಟ್ಟಿನಲ್ಲಿ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು' ಎಂದು ಪೀಠ ಸಲಹೆ ನೀಡಿದೆ.
- ರಜೆ ಅವಧಿ- ಅಗತ್ಯಗಳಿಗೆ ಸ್ಪಂದಿಸಬೇಕು: 'ಪಿತೃತ್ವ ರಜೆಯ ಅವಧಿಯು ಪೋಷಕರು ಮತ್ತು ಮಗುವಿನ ಅಗತ್ಯಗಳಿಗೆ ಸ್ಪಂದಿಸುವ ರೀತಿಯಲ್ಲಿ ನಿರ್ಧರಿಸಬೇಕು' ಎಂದು ಪೀಠ ಸರ್ಕಾರಕ್ಕೆ ಸೂಚಿಸಿದೆ.
- 'ಈ ಅವಧಿಯಲ್ಲಿ ಮಗುವಿಗೆ ತಂದೆಯ ಉಪಸ್ಥಿತಿ ಅಗತ್ಯ ಉದ್ಯೋಗ ನಿರ್ಬಂಧಗಳಿಂದಾಗಿ ತಂದೆಯ ಅನುಪಸ್ಥಿತಿ ಎದುರಾಗದಂತೆ ನೋಡಿ ಕೊಳ್ಳಬೇಕು' ಎಂದೂ ಪೀಠ ಸೂಚಿಸಿದೆ.



# ಮಾಲಿನ್ಯವ ನಿವಾರಿಸುವ ತ್ಯಾಜ್ಯ

• ಅಮೃತೇಶ್ವರಿ ಬಿ.

# ಇಂಧನ ಉಳಿತಾಯಕ್ಕೆ ಬಂದ ಬುರುಗು 'ನ್ಯಾನೋಬಬಲ್'

• ಸುಧೀರ ಎಚ್. ಎಸ್.

ಈಗ ಎಲ್ಲೆಡೆ ಎಲ್‌ಪಿಜಿ ಅಭಾವದ್ದೇ ಮಾತು. ಮುಂದೆಯೂ ಎಲ್‌ಪಿಜಿ ಬಿಕ್ಕಟ್ಟು ಇನ್ನೂ ಕಾಡುವ ಸಾಧ್ಯತೆ ಇರುತ್ತದೆ. ಆದರೆ, ಭಾರತೀಯ ವಿಜ್ಞಾನಿಗಳು ಕಂಡುಹಿಡಿದಿರುವ ಈ 'ನ್ಯಾನೋಬಬಲ್' ತಂತ್ರಜ್ಞಾನ ಈ ಬಿಕ್ಕಟ್ಟಿಗೆ ಪರಿಹಾರ ನೀಡುವಂತಿದೆ

## ❖ 'ಬಸವ ಪ್ರಶಸ್ತಿ'ಗೆ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಭಾಜನ

- ಇಲ್ಲಿನ ಸುಭಾಶ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್‌ನಿಂದ ನೀಡುವ 2026ನೇ ಸಾಲಿನ 'ಬಸವ ಪ್ರಶಸ್ತಿ'ಗೆ ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಭಾಜನರಾಗಿದ್ದಾರೆ.
- ಪ್ರಶಸ್ತಿ ₹50 ಸಾವಿರ ನಗದು, ಪ್ರಶಸ್ತಿ ಪತ್ರ, ಫಲಕವನ್ನು ಒಳಗೊಂಡಿದೆ. ಬೆಂಗಳೂರಿನ ಗಾಂಧಿ ಭವನದಲ್ಲಿ ಮಾರ್ಚ್ 22ರಂದು ಬೆಳಿಗ್ಗೆ 11.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಶರಣಗೌಡ ಪಾಟೀಲ ಪಾಳಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕ ಆಯೋಗದ 2026ರ ವಾರ್ಷಿಕ ವರದಿಯಲ್ಲಿ ಉಲ್ಲೇಖ**

# ಭಾರತದಲ್ಲಿ ಕುಸಿಯುತ್ತಿದೆ ಧಾರ್ಮಿಕ ಸ್ವಾತಂತ್ರ್ಯ

**ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವು ನಿರಂತರವಾಗಿ ಕುಸಿಯುತ್ತಿದೆ ಎಂದು ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕ ಆಯೋಗದ 2026ರ ವಾರ್ಷಿಕ ವರದಿ ಕಳವಳ ವ್ಯಕ್ತಪಡಿಸಿದೆ. ಭಾರತವನ್ನು 'ಆತಂಕದ ದೇಶ' ಎಂದು ಪರಿಗಣಿಸಬೇಕು; ನಿರ್ದಿಷ್ಟ ವ್ಯಕ್ತಿಗಳು ಮತ್ತು ಆರ್‌ಎಸ್‌ಎಸ್, ಆರ್‌ಎಡಬ್ಲ್ಯುನಂಥ (ರಾ) ಸಂಸ್ಥೆಗಳ ಮೇಲೆ ನಿರ್ಬಂಧ ಹೇರಬೇಕು ಎಂದು ವರದಿಯಲ್ಲಿ ಅಮೆರಿಕ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಒಟ್ಟು 29 ದೇಶಗಳಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ವರದಿಯಲ್ಲಿ ವಿಶ್ಲೇಷಿಸಲಾಗಿದೆ. ವರದಿಯು ಪಕ್ಷಪಾತದಿಂದ ಕೂಡಿದ್ದು, ಅದನ್ನು ತಿರಸ್ಕರಿಸುವುದಾಗಿ ಭಾರತ ಪ್ರತಿಕ್ರಿಯಿಸಿದೆ**

ಪ್ರಜಾವಾಣಿ ವಾರ್ತೆ

ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕದ ಆಯೋಗದ (ಯುಎಸ್‌ಸಿಐಆರ್‌ಎಫ್) 2026ರ ವಾರ್ಷಿಕ ವರದಿಯು ಭಾರತದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹಲ್ಲೆ, ದೌರ್ಜನ್ಯ ನಡೆಯುತ್ತಿದ್ದು, ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿ ಕಳವಳಕಾರಿಯಾಗಿದೆ ಎಂದಿದೆ. ಈ ದಿಸೆಯಲ್ಲಿ ಭಾರತವೂ ಸೇರಿದಂತೆ ಹಲವು ದೇಶಗಳ ನಿರ್ದಿಷ್ಟ ವ್ಯಕ್ತಿ ಮತ್ತು ಸಂಸ್ಥೆಗಳ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಲವು ಶಿಫಾರಸುಗಳನ್ನೂ ಮಾಡಿದೆ.

ಯುಎಸ್‌ಸಿಐಆರ್‌ಎಫ್, ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ (ಐಆರ್‌ಎಫ್‌ಎ) 1998ರ ಅಡಿ ರಚನೆಯಾಗಿರುವ ಒಂದು ಸ್ವತಂತ್ರ ಹಾಗೂ ದ್ವಿಪಕ್ಷೀಯ ಸಂಸ್ಥೆಯಾಗಿದ್ದು, ಅಮೆರಿಕ ಸರ್ಕಾರಕ್ಕೆ ಸಲಹೆ ನೀಡುತ್ತದೆ. ವಿದೇಶಗಳ ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿಗತಿ ಮತ್ತು ಈ ದಿಸೆಯಲ್ಲಿ ನೀತಿ ಬದಲಾವಣೆಯ ಅಗತ್ಯದ ಬಗ್ಗೆ ಅಮೆರಿಕದ ಅಧ್ಯಕ್ಷ, ವಿದೇಶಾಂಗ ಕಾರ್ಯದರ್ಶಿ ಮತ್ತು ಸಂಸತ್‌ಗೆ ಸಲಹೆಗಳನ್ನು ನೀಡುತ್ತದೆ. ಯುಎಸ್‌ಸಿಐಆರ್‌ಎಫ್ 2026ರ ವಾರ್ಷಿಕ ವರದಿಯು, 2025ರಲ್ಲಿ 29 ದೇಶಗಳಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಮತ್ತು ಪ್ರಗತಿಯ ಕುರಿತ ಅಧ್ಯಯನದ ಆಧಾರದಲ್ಲಿ ವಿಶ್ಲೇಷಣೆ, ಶಿಫಾರಸುಗಳನ್ನು ಮಾಡಿದೆ. ಸಂದರ್ಶನ, ಸಭೆ ಮತ್ತು ಪ್ರವಾಸಗಳ ಆಧಾರದಲ್ಲಿ ವರದಿ ಸಿದ್ಧಪಡಿಸಲಾಗಿದೆ.

ವರದಿಯಲ್ಲಿ ದೇಶಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ. ಒಂದು, 18 ದೇಶಗಳನ್ನು 'ಆತಂಕ ಉಂಟುಮಾಡುವ ದೇಶಗಳು' (ಸಿಪಿಸಿ) ಎಂದು ಕರೆಯಲಾಗಿದೆ; ಮತ್ತೊಂದು, 11 ದೇಶಗಳನ್ನು 'ವಿಶೇಷ ಗಮನ ನೀಡಬೇಕಾದ ದೇಶಗಳು' (ಎಸ್‌ಡಬ್ಲ್ಯುಎಲ್) ಎಂದಿದೆ. ಏಳು ಸಂಸ್ಥೆ/ಸಂಘಟನೆಗಳನ್ನು 'ಆತಂಕ ಉಂಟುಮಾಡುವ ಸಂಸ್ಥೆಗಳು' (ಇಪಿಸಿ) ಎಂದು ಪಟ್ಟಿ ಮಾಡಲಾಗಿದೆ. ದೇಶವು 2025ರಲ್ಲಿ ಐಆರ್‌ಎಫ್‌ಎ ಹೇಗೆ ಜಾರಿ ಮಾಡಿದೆ ಎನ್ನುವುದರ ಮಾಹಿತಿಯನ್ನೂ ವರದಿ ಒಳಗೊಂಡಿದೆ. ಜತೆಗೆ, ಹೊರದೇಶಗಳ ಧಾರ್ಮಿಕ ಸ್ವಾತಂತ್ರ್ಯ ಕುರಿತ ವರದಿಯಲ್ಲಿನ ಶಿಫಾರಸುಗಳನ್ನು ಸಂಸತ್ತು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಎನ್ನುವುದನ್ನೂ ವಿವರಿಸಲಾಗಿದೆ.



**ಭಾರತದಲ್ಲಿ ಆತಂಕದ ಸ್ಥಿತಿ:** ಭಾರತವು 'ಆತಂಕ ಉಂಟುಮಾಡುವ ದೇಶ'ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಗೊಳಿಸಿದೆ. ಆದರೆ, 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಕಾಯ್ದೆಗಳನ್ನು, ಕಠಿಣ ನೀತಿಗಳನ್ನು ಜಾರಿಗೊಳಿಸಿದೆ. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ), ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ), ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ), ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ), ವಕ್ಫ್ ತಿದ್ದುಪಡಿ ಕಾಯ್ದೆ ಮತ್ತು 2025ರ ವಲಸೆ ಮತ್ತು ವಿದೇಶಿಯರ ಮಸೂದೆ- ಇವುಗಳನ್ನು ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡೇ ಜಾರಿಗೊಳಿಸಲಾಗಿದ್ದು, ಇವು ಧಾರ್ಮಿಕ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿವೆ ಎಂದು ವರದಿ ಹೇಳಿದೆ.

ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರನ್ನು ಮತ್ತು ಅವರ ಪ್ರಾರ್ಥನಾ ಸ್ಥಳಗಳನ್ನು ಗುರಿಯಾಗಿಸಿ ಕಾನೂನು ಬದಲಾವಣೆ ಮಾಡಲಾಗಿದೆ. 12 ರಾಜ್ಯಗಳಲ್ಲಿ ಮತಾಂತರ ನಿಷೇಧ ಕಾಯ್ದೆ ತರಲಾಗಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನಿಗದಿಪಡಿಸಲಾಗಿದೆ. ಬಲವಂತ ಮತಾಂತರದ ಆರೋಪದಿಂದ ಜೇಮ್ಸ್ ವ್ಯಾಟ್ಸನ್ ಎನ್ನುವ ಅಮೆರಿಕ ಪ್ರಜೆಯನ್ನು ಬಂಧಿಸಲಾಗಿತ್ತು. ಧಾರ್ಮಿಕ ನಿರಾಶ್ರಿತರನ್ನು ವಶಕ್ಕೆ ಪಡೆಯುವ, ದೇಶದಿಂದ ಹೊರಹಾಕುವ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುವ ಘಟನೆಗಳು ವ್ಯಾಪಕವಾಗಿ ನಡೆಯುತ್ತಿವೆ. ಉತ್ತರ ಪ್ರದೇಶ, ಅಸ್ಸಾಂನಲ್ಲಿ ಗೋರಕ್ಷಣೆಯ ನೆಪದಲ್ಲಿ ಹಲವು ಮುಸ್ಲಿಮರ ಮೇಲೆ ಗುಂಪು ಹಲ್ಲೆ ಮಾಡಿ ಕೊಲ್ಲಲಾಗಿದೆ ಎಂದು ವರದಿ ಉಲ್ಲೇಖಿಸಿದೆ.

ಮುಸ್ಲಿಮರ ಮೇಲೆ ದಾಳಿ, ಮತಾಂತರ: ವರ್ಷದುದ್ದಕ್ಕೂ ಹಲವು ರಾಜ್ಯಗಳಲ್ಲಿ ಹಿಂದೂ ರಾಷ್ಟ್ರೀಯವಾದಿ ಗುಂಪುಗಳು ನಿರ್ಭೀತಿಯಿಂದ ಕ್ರೈಸ್ತ ಮತ್ತು ಮುಸ್ಲಿಮರನ್ನು ಪ್ರಚೋದನೆಗೆ, ಕಿರುಕುಳಕ್ಕೆ ಒಳಪಡಿಸಿವೆ; ಹಲವು ರಾಜ್ಯ ಸರ್ಕಾರಗಳು ಅವರ ಮೇಲೆ ಹಿಡಿತ ಸಾಧಿಸಲು ಪ್ರಾರ್ಥನಾ ಮಂದಿರಗಳನ್ನು ಗುರಿಯಾಗಿಸಿಕೊಂಡಿವೆ ಎಂದು ವಿಶ್ಲೇಷಿಸಿರುವ ವರದಿಯು, ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದು ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರರನ್ನು ಸೇರಿಸಲು ಅವಕಾಶ ನೀಡಿದ್ದು ಮತ್ತು ವಕ್ಫ್ ಆಸ್ತಿಗಳನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದ ಬಗ್ಗೆ ಉಲ್ಲೇಖಿಸಿದೆ. ಹಾಗೆಯೇ ಉತ್ತರಾಖಂಡ ಸರ್ಕಾರವು ಅಲ್ಪಸಂಖ್ಯಾತ ಶಿಕ್ಷಣ ಕಾಯ್ದೆಗೆ (ಯುಎಸ್‌ಎಎಂಇ) ತಿದ್ದುಪಡಿ ತಂದು ಮದರಸಗಳ ಜತೆಗೆ ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತರ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದ ಹಿಡಿತಕ್ಕೆ ತೆಗೆದುಕೊಂಡಿತು ಎಂದು ಹೇಳಿದೆ. ಪಹಲ್ಗಾಮ್ ಘಟನೆಯನ್ನೂ ಉಲ್ಲೇಖಿಸಲಾಗಿದೆ.

ಸಿಎಎ ವಿರುದ್ಧ ಹೋರಾಟ ನಡೆಸಿದ ವಿದ್ಯಾರ್ಥಿ ಮುಖಂಡ ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಅವರು ಐದು ವರ್ಷಗಳಿಂದ ಜೈಲಿನಲ್ಲಿದ್ದು, ವಿಚಾರಣೆಯೇ ನಡೆದಿಲ್ಲ. ಕಾಶ್ಮೀರ ಮತ್ತು ಭಾರತದಲ್ಲಿ ಮುಸ್ಲಿಮರ ಮೇಲಿನ ದಾಳಿಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಬರೆದರೆಂದು ವಿಶ್ವವಿದ್ಯಾಲಯವೊಂದರ ಪ್ರೊಫೆಸರ್ ಅಲಿಖಾನ್ ಮಹ್ಮದಾಬಾದ್ ಅವರ ವಿರುದ್ಧ ಬಿಜೆಪಿ ಮುಖಂಡರೊಬ್ಬರು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದರು ಎಂದು ದೂರು ದಾಖಲಿಸಿದ್ದರು. ಪ್ರಕರಣದಲ್ಲಿ ಅವರನ್ನು ಬಂಧಿಸಲಾಗಿತ್ತು ಎಂದು ವರದಿ ಉಲ್ಲೇಖಿಸಿದೆ.

ಕೇಂದ್ರ ಸರ್ಕಾರವು ಈ ವರದಿಯನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದು, ವರದಿಯು ಪಕ್ಷಪಾತದಿಂದ ಕೂಡಿದೆ ಎಂದಿದೆ.

### ಆಯೋಗ ಸರ್ಕಾರಕ್ಕೆ ಮಾಡಿರುವ ಶಿಫಾರಸುಗಳು

- ಭಾರತವು ಅತ್ಯಂತ ವ್ಯವಸ್ಥಿತವಾಗಿ ಧಾರ್ಮಿಕ ಸ್ವಾಂತಂತ್ರ್ಯದ ಉಲ್ಲಂಘನೆಯಲ್ಲಿ ತೊಡಗಿಕೊಂಡಿದೆ. ಇದು ಅತಿರೇಕದ ಮಟ್ಟದಲ್ಲಿದೆ. ಹೀಗಾಗಿ ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಯಲ್ಲಿ ವ್ಯಾಖ್ಯಾನಿಸಿದಂತೆ ಭಾರತವನ್ನು ಆತಂಕ ಉಂಟುಮಾಡುತ್ತಿರುವ ರಾಷ್ಟ್ರ (ಸಿಪಿಸಿ) ಎಂದು ಗುರುತಿಸಬೇಕು
- ದೇಶದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿಗತಿಗಳನ್ನು ಭಾರತದಲ್ಲಿದ್ದುಕೊಂಡು ಮೌಲ್ಯಮಾಪನ ಮಾಡುವುದಕ್ಕೆ ಯುಎಸ್‌ಸಿಐಆರ್‌ಎಫ್ ಮತ್ತು ಅಮೆರಿಕ ವಿದೇಶಾಂಗ ಇಲಾಖೆಯಂತಹ ಅಮೆರಿಕದ ಸಂಸ್ಥೆಗಳಿಗೆ ಅವಕಾಶ ನೀಡಲು ಭಾರತದ ಮೇಲೆ ಒತ್ತಡ ಹಾಕಬೇಕು
- ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘನೆ ಮಾಡುತ್ತಿರುವ ಮತ್ತು ಉಲ್ಲಂಘನೆ ಆಗುತ್ತಿರುವುದನ್ನು ತಡೆಯದ ಭಾರತದ ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್ (ಆರ್‌ಡಬ್ಲ್ಯುಎ-ರಾ) ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದಂತಹ (ಆರ್‌ಎಸ್‌ಎಸ್) ಸಂಸ್ಥೆಗಳು ಮತ್ತು ವ್ಯಕ್ತಿಗಳ ಮೇಲೆ ನಿರ್ಬಂಧ ಹೇರಬೇಕು. ಸಂಸ್ಥೆ/ವ್ಯಕ್ತಿಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಬೇಕು ಮತ್ತು ಅಮೆರಿಕಕ್ಕೆ ಅವರ ಪ್ರವೇಶವನ್ನು ನಿರ್ಬಂಧಿಸಬೇಕು
- ಭವಿಷ್ಯದಲ್ಲಿ ಅಮೆರಿಕವು ಭಾರತದೊಂದಿಗೆ ಮಾಡುವ ದ್ವಿಪಕ್ಷೀಯ ವ್ಯಾಪಾರ ಮತ್ತು ಭದ್ರತಾ ಸಹಕಾರ ನೀತಿಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯ ಸುಧಾರಿಸುವುದು ಕೂಡ ಒಂದು ವಿಷಯವನ್ನಾಗಿಸಬೇಕು



- ಭಾರತದಲ್ಲಿ ಅಮೆರಿಕದ ನಾಗರಿಕರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ನಿರಂತರವಾಗಿ ಬೆದರಿಕೆ ಹಾಕುವುದು ಮತ್ತು ಕಿರುಕುಳ ನಡೆಯುತ್ತಿರುವುದರಿಂದ ಭಾರತಕ್ಕೆ ಶಸ್ತ್ರಾಸ್ತ್ರಗಳ ಮಾರಾಟವನ್ನು ಸ್ಥಗಿತಗೊಳಿಸುವುದಕ್ಕೆ ಶಸ್ತ್ರಾಸ್ತ್ರ ರಫ್ತು ನಿಯಂತ್ರಣ ಕಾಯ್ದೆಯ 6ನೇ ಸೆಕ್ಷನ್ ಅನ್ನು ಜಾರಿಗೊಳಿಸಬೇಕು

**ಆತಂಕ ಉಂಟುಮಾಡುವ ದೇಶಗಳು**

1\. ಅಫ್ಗಾನಿಸ್ತಾನ 2. ಮ್ಯಾನ್ಮಾರ್ 3. ಚೀನಾ 4. ಕ್ಯೂಬಾ 5. ಎರಿಟ್ರಿಯಾ 6. ಭಾರತ 7. ಇರಾನ್ 8. ಲಿಬಿಯಾ 9. ನಿಕರಾಗುವಾ 10. ನೈಜೀರಿಯಾ 11. ಉತ್ತರ ಕೊರಿಯಾ 12. ಪಾಕಿಸ್ತಾನ 13.ರಷ್ಯಾ 14. ಸೌದಿ ಅರೇಬಿಯಾ 15. ಸಿರಿಯಾ 16. ತಜಕಿಸ್ತಾನ 17.ತುರ್ಕ್‌ಮೆನಿಸ್ತಾನ 18.ವಿಯೆಟ್ನಾಂ

**ವಿಶೇಷ ಗಮನ ನೀಡಬೇಕಾದ ರಾಷ್ಟ್ರಗಳು**

1\. ಅಲ್ಜೀರಿಯಾ 2. ಅಜರ್‌ಬೈಜಾನ್ 3. ಈಜಿಪ್ಟ್ 4. ಇಂಡೊನೇಷ್ಯಾ 5. ಇರಾಕ್ 6. ಕಜಕ್‌ಸ್ತಾನ 7. ಕಿರ್ಗಿಸ್ತಾನ 8. ಮಲೇಷ್ಯಾ 9. ಕತಾರ್ 10. ಟರ್ಕಿ 11. ಉಜ್ಬೇಕಿಸ್ತಾನ

**ಆತಂಕ ಉಂಟುಮಾಡುವ ಸಂಘಟನೆಗಳು**

1\. ಅಲ್-ಶಬಾಬ್ 2. ಬೋಕೋ ಹರಾಮ್ 3. ಇಸ್ಲಾಮಿಕ್ ಸ್ಟೇಟ್ (ಸಹೆಲ್ ಪ್ರಾಂತ್ಯ) 4. ಇಸ್ಲಾಮಿಕ್ ಸ್ಟೇಟ್ (ಪಶ್ಚಿಮ ಆಫ್ರಿಕಾ) 5. ಜಮಾತ್ ನಸರ್ ಅಲ್-ಸ್ಲಾಂ ವಲ್ ಮುಸ್ಲಿಮೀನ್ 6. ರ‍್ಯಾಪಿಡ್ ಸಪೋರ್ಟ್ ಫೋರ್ಸಸ್ 7. ಹುಥಿ ಬಂಡುಕೋರ ಸಂಘಟನೆ

### ವರದಿಯಲ್ಲಿರುವುದೇನು?

- 2025ರ ಮಾರ್ಚ್‌ನಲ್ಲಿ ಹಿಂದೂ ರಾಷ್ಟ್ರೀಯವಾದಿ ಸಂಘಟನೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮಹಾರಾಷ್ಟ್ರದಲ್ಲಿರುವ 17ನೇ ಶತಮಾನದ ಮೊಘಲ್ ದೊರೆ ಔರಂಗಜೇಬನ ಸಮಾಧಿಯನ್ನು ತೆರವುಗೊಳಿಸಲು ಕರೆ ನೀಡಿದ್ದು ಹಿಂಸಾಚಾರಕ್ಕೆ ಕಾರಣವಾಗಿತ್ತು. ವಿಎಚ್‌ಪಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕುರ್‌ಅನ್ ಅನ್ನು ಅಪವಿತ್ರಗೊಳಿಸಲಾಗಿದೆ ಎಂಬ ವದಂತಿ ಹಬ್ಬಿ ಅದು ಹಿಂಸಾಚಾರಕ್ಕೆ ಕಾರಣವಾಗಿ ಹಲವರು ಗಾಯಗೊಂಡಿದ್ದರು. ಕರ್ಫ್ಯೂ ವಿಧಿಸಲಾಗಿತ್ತು
- 2025ರ ಜೂನ್‌ನಲ್ಲಿ ಒಡಿಶಾದ 20 ಕ್ರೈಸ್ತ ಕುಟುಂಬಗಳು ಹಿಂದೂ ಧರ್ಮಕ್ಕೆ ಮತಾಂತರ ಆಗಲು ಒಪ್ಪದೇ ಇದ್ದುದಕ್ಕೆ ಹಿಂದೂ ರಾಷ್ಟ್ರೀಯವಾದಿಗಳ ಗುಂಪು ಆ ಕುಟುಂಬಗಳ ಮೇಲೆ ದಾಳಿ ನಡೆಸಿತ್ತು. ಘಟನೆಯಲ್ಲಿ ಎಂಟು ಮಂದಿ ಗಾಯಗೊಂಡಿದ್ದರು. ಈ ಪ್ರಕರಣದಲ್ಲಿ ಪೊಲೀಸರು ಮಧ್ಯಪ್ರವೇಶ ಮಾಡಿರಲಿಲ್ಲ
- ಮುಸ್ಲಿಂ ಬಹುಸಂಖ್ಯಾತರಾಗಿರುವ ಕಾಶ್ಮೀರದಲ್ಲಿ 2025ರ ಏಪ್ರಿಲ್‌ನಲ್ಲಿ ಮೂವರು ಬಂದೂಕುಧಾರಿಗಳು ಹಿಂದೂ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಹಂತಕರು ಗುಂಡು ಹೊಡೆಯುವುದಕ್ಕೂ ಮುನ್ನ ಸಂತ್ರಸ್ತರ ಬಳಿ ಕಲ್ಮಾ ಪಠಿಸಲು ಹೇಳಿದ್ದರು. ಪಠಿಸದೇ ಇದ್ದವರನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ. ಈ ಘಟನೆಯು ಭಾರತ ಮತ್ತು ಪಾಕಿಸ್ತಾನದ ನಡುವೆ ಐದು ದಿನಗಳ ಸೇನಾ ಸಂಘರ್ಷಕ್ಕೆ ಕಾರಣವಾಯಿತು. ಈ ಘಟನೆಯು ಭಾರತದಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ದಾಳಿಗಳನ್ನು ನಡೆಸಲು ಪ್ರೇರಣೆ ನೀಡಿತಲ್ಲದೆ, ದೇಶದಲ್ಲಿ ಮುಸ್ಲಿಂ ವಿರೋಧಿ ಭಾವನೆ ಹೆಚ್ಚಾಗಲೂ ಕಾರಣವಾಯಿತು. ಧಾರ್ಮಿಕ ಅಲ್ಪಸಂಖ್ಯಾತರನ್ನು 'ಅಕ್ರಮ' ವಲಸಿಗರು ಎಂದು ಪರಿಗಣಿಸಿ, ಅವರ ಗಡಿಪಾರನ್ನು ಸಮರ್ಥಿಸಿಕೊಳ್ಳಲು ಈ ದಾಳಿಯ ನಂತರದ ಬೆಳವಣಿಗೆಗಳನ್ನು ಕೇಂದ್ರ ಸರ್ಕಾರವು ಬಳಸಿಕೊಂಡಿತು



- 2025ರ ಮೇನಲ್ಲಿ ಭಾರತದ ಅಧಿಕಾರಿಗಳು 15 ಮಂದಿ ಕ್ರೈಸ್ತರು ಸೇರಿದಂತೆ 50 ರೋಹಿಂಗ್ಯಾ ನಿರಾಶ್ರಿತರನ್ನು ವಶಕ್ಕೆ ಪಡೆದು, ಮ್ಯಾನ್ಮಾರ್‌ನ ಕರಾವಳಿಯವರೆಗೆ ಕರೆದೊಯ್ದು, ಬಲವಂತವಾಗಿ ಮ್ಯಾನ್ಮಾರ್‌ನತ್ತ ಈಜುವಂತೆ ಮಾಡಿದರು
- ಭಾರತೀಯ ನಾಗರಿಕರಾಗಿದ್ದರೂ, ಬಂಗಾಳಿ ಭಾಷೆ ಮಾತನಾಡುತ್ತಿದ್ದ ನೂರಾರು ಮುಸ್ಲಿಮರನ್ನು ಅಸ್ಸಾಂನಿಂದ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಯಿತು. ಗಡಿಪಾರಾದ ಎಲ್ಲರೂ ಬಾಂಗ್ಲಾದೇಶದ ಮುಸ್ಲಿಂ ಒಳನುಸುಳುಕೋರರು ಎಂದು ಆಡಳಿತಾರೂಢ ಬಿಜೆಪಿಯ ಪದಾಧಿಕಾರಿಗಳು ಆರೋಪಿಸಿದ್ದರು. 'ಅಕ್ರಮ ವಲಸೆ'ಯನ್ನು ತಡೆಯುವುದಕ್ಕಾಗಿ ಸರ್ಕಾರ ಸೆಪ್ಟೆಂಬರ್‌ನಲ್ಲಿ ವಿದೇಶಿ ಪ್ರಜೆಗಳ ಕಾಯ್ದೆಗೆ ಹೊಸ ನಿಯಮಗಳನ್ನು ರೂಪಿಸಿ ಆದೇಶ ಹೊರಡಿಸಿತು

### ತಳ್ಳಿ ಹಾಕಿದ ಭಾರತ

ಅಮೆರಿಕದ ಆಯೋಗದ ವರದಿಯನ್ನು ಭಾರತವು ತಳ್ಳಿಹಾಕಿದೆ. ವಿದೇಶಾಂಗ ಸಚಿವಾಲಯವು ಈ ಬಗ್ಗೆ ಹೇಳಿಕೆ ನೀಡಿದ್ದು, 'ಯುಎಸ್‌ಸಿಐಆರ್‌ಎಫ್ ಹಲವು ವರ್ಷಗಳಿಂದ ವಸ್ತುನಿಷ್ಠ ಸಂಗತಿಗಳಿಗಿಂತ 'ಪ್ರಶ್ನಾರ್ಹ ಮೂಲಗಳು ಮತ್ತು ಸೈದ್ಧಾಂತಿಕ ಕಥನ'ಗಳ ಆಧಾರದಲ್ಲಿ ಭಾರತದ ಕುರಿತಾಗಿ 'ತಿರುಚಿದ ಮತ್ತು ಆಯ್ದ' ಚಿತ್ರಣವನ್ನು ನೀಡುತ್ತಾ ಬಂದಿದೆ' ಎಂದು ಹೇಳಿದೆ.

ವರದಿಯು ಭಾರತದ ಬಗ್ಗೆ ಪಕ್ಷಪಾತದಿಂದ ಕೂಡಿದ ಮತ್ತು ಪ್ರಚೋದನಕಾರಿ ಅಭಿಪ್ರಾಯ ವ್ಯಕ್ತಪಡಿಸಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಆಯೋಗದ ಪುನರಾವರ್ತಿತ ಮಿಥ್ಯ ನಿರೂಪಣೆಗಳು ಅದರ ವಿಶ್ವಾಸಾರ್ಹತೆಯನ್ನು ಹಾಳುಗೆಡವಲಿವೆ' ಎಂದು ಅವರು ಹೇಳಿದ್ದಾರೆ.

## ❖ ಭೀಮ್ ಆ್ಯಪ್‌ಗೆ ಧೋನಿ ರಾಯಭಾರಿ

- ಬೆಂಗಳೂರು 'ಭೀಮ್ ಆ್ಯಪ್'ಗೆ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಅವರು ರಾಯಭಾರಿ ಆಗಿದ್ದಾರೆ. ಭೀಮ್ ಆ್ಯಪ್ ಜನರ ಬಳಕೆಗೆ ಲಭ್ಯವಾಗಿ ಒಂದು ದಶಕ ಪೂರ್ಣಗೊಳ್ಳುತ್ತಿರುವ ಹೊತ್ತಿನಲ್ಲಿ ಈ ನೇಮಕ ಆಗಿದೆ. 'ಡಿಜಿಟಲ್ ಪಾವತಿಗಳು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಗಮನ ಹರಿಸಿದೆ' ಎಂದು ಧೋನಿ ಹೇಳಿದ್ದಾರೆ.

## ❖ ಆರ್‌ಟಿಐ ವ್ಯಾಪ್ತಿಗೆ ಅಪೆಕ್ಸ್ ಬ್ಯಾಂಕ್ : ಮಾಹಿತಿ ಆಯೋಗ

**ಸಂದರ್ಭ: ಅಪೆಕ್ಸ್ ಬ್ಯಾಂಕ್ ಅನ್ನು ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಸಾರ್ವಜನಿಕ ಪ್ರಾಧಿಕಾರ ಎಂದು ಘೋಷಿಸಿರುವ ರಾಜ್ಯ ಮಾಹಿತಿ ಆಯೋಗವು, ಎಲ್ಲಾ ಕಚೇರಿಗಳಲ್ಲಿ ತಕ್ಷಣವೇ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸಬೇಕು ಎಂದೂ ಆದೇಶಿಸಿದೆ.**

- ರಾಜ್ಯ ಮಾಹಿತಿ ಆಯುಕ್ತ ಎಸ್. ರಾಜಶೇಖರ ಈ ಆದೇಶ ಹೊರಡಿಸಿದ್ದಾರೆ.
- ಹನುಮಂತ ವಸಂತ ಶಿಂಧೆ ಸಲ್ಲಿಸಿದ್ದ ದ್ವಿತೀಯ ಮೇಲ್ಮನವಿಯಲ್ಲಿ ನಿರಾಣಿ ಶುಗರ್ಸ್ ಲಿಮಿಟೆಡ್ ಸಂಸ್ಥೆಯು ಮಾರ್ಚ್ 2022ರಿಂದ ಜೂನ್ 2024ರವರೆಗೆ ಅಪೆಕ್ಸ್ ಬ್ಯಾಂಕಿನಿಂದ ಪಡೆದ ಸಾಲಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ದಾಖಲೆಗಳ ಪ್ರತಿಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಆದರೆ ಬ್ಯಾಂಕ್ ತಾವು ಸಹಕಾರ ಸಂಘವಾಗಿರುವುದರಿಂದ ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿ ಮಾಹಿತಿ ನೀಡಲು ನಿರಾಕರಿಸಿತ್ತು.
- ಈ ಬಗ್ಗೆ ವಿಚಾರಣೆ ನಡೆಸಿದ ಮಾಹಿತಿ ಆಯುಕ್ತರು, ಬ್ಯಾಂಕ್ ಕಾರ್ಯಾಚರಣೆಯ ಮೇಲೆ ಸರ್ಕಾರದ ಆಳವಾದ ಮತ್ತು ವ್ಯಾಪಕ ನಿಯಂತ್ರಣ ಇದೆ' ಎಂದು ತಮ್ಮ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.
- ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿಯಲ್ಲಿ ಪ್ರಮುಖ ಮಾಹಿತಿಯನ್ನು ಅಪೆಕ್ಸ್ ಬ್ಯಾಂಕ್ ಸರ್ಾಜನಿಕವಾಗಿ ಪ್ರಕಟಿಸಬೇಕು. ಇದನ್ನು ತಕ್ಷಣ ಜಾರಿಗೆ ತರಲು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ನೋಂದಣಾಧಿಕಾರಿಗಳು ಕ್ರಮವಹಿಸಬೇಕು ಎಂದು ಸೂಚನೆ ನೀಡಿದ್ದಾರೆ.

## ❖ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರಕಾನೂನು ತಿದ್ದುಪಡಿಗೆ ವಿಧಾನ ಪರಿಷತ್ ಒಪ್ಪಿಗೆ

**ಸಂದರ್ಭ: ಖಾಸಗಿ ಜಾಗದಲ್ಲಿನ ಜಾಹೀರಾತಿಗೂ ಶುಲ್ಕ, ಸಾರ್ವಜನಿಕ, ಖಾಸಗಿ ಜಾಗಗಳಲ್ಲಿ ಜಾಹೀರಾತು ಪ್ರದರ್ಶಿಸುವ ಕಂಪನಿಗಳಿಂದ ಶುಲ್ಕ ವಸೂಲಿಗೆ ಹಾಗೂ ಅನಧಿಕೃತವಾಗಿ ಜಾಹೀರಾತು ಫಲಕ ಹಾಕಿದವರಿಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ ಮಸೂದೆಗೆ ವಿಧಾನ ಪರಿಷತ್ ಬುಧವಾರ ಒಪ್ಪಿಗೆ ನೀಡಿತು.**

- ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ ಮಂಡಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, 'ಬೆಂಗಳೂರು ಬಿಟ್ಟು, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಾಹೀರಾತು ಕಂಪನಿಗಳಿಂದ ಶುಲ್ಕ ವಸೂಲಿ ಮಾಡಲು ಮಸೂದೆ ಅವಕಾಶ ಕಲ್ಪಿಸುತ್ತದೆ. ಖಾಸಗಿ ಜಾಗದ ಮಾಲೀಕರಿಂದ ಶುಲ್ಕ ವಸೂಲಿ ಮಾಡುವುದಿಲ್ಲ' ಎಂದರು.
- ಅನಧಿಕೃತವಾಗಿ ಜಾಹೀರಾತು ಫಲಕಗಳನ್ನು ಹಾಕಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಇವುಗಳನ್ನು ಪತ್ತೆಹಚ್ಚಲು ಡ್ರೋನ್ ಮೂಲಕ ಸರ್ವೆ ಮಾಡಲಾಗುವುದು ಎಂದು ತಿಳಿಸಿದರು.
- 'ಸ್ಥಳೀಯ ಸಂಸ್ಥೆಗಳು ಗುರುತಿಸಿರುವ ಜಾಗದಲ್ಲಿ ಮಾತ್ರ ಜಾಹೀರಾತು ಪ್ರದರ್ಶಿಸಲು ಅವಕಾಶ ಇದೆ. ಶುಲ್ಕ ಕಟ್ಟದೆ ಇದ್ದರೆ ಜಾಹೀರಾತು ಫಲಕಗಳನ್ನು ನೆಲಸಮಗೊಳಿಸಲಾಗುವುದು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಎಷ್ಟು ಜಾಹೀರಾತು ಫಲಕಗಳು ಇವೆ, ಇವುಗಳಲ್ಲಿ ಅಧಿಕೃತ ಯಾವುದು? ಅನಧಿಕೃತ ಯಾವುದು ಎಂದು ತಿಳಿಯಲು ಆಡಿಟ್ ಮಾಡಿಸುತ್ತೇವೆ' ಎಂದರು.
- ಮಸೂದೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಬಿಜೆಪಿಯ ಸಿ.ಟಿ.ರವಿ, ಡಿ.ಎಸ್.ಅರುಣ್, ಭಾರತಿ ಶೆಟ್ಟಿ, ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಅವರು ಖಾಸಗಿ ಜಾಗದಲ್ಲಿ ಜಾಹೀರಾತು ಪ್ರದರ್ಶಿಸಲು ಶುಲ್ಕ ಹಾಕುವುದನ್ನು ವಿರೋಧಿಸಿದರು.

## ❖ ಪೊಲೀಸ್ ಮಂಡಳಿ ಮೂಲಕವೇ ವರ್ಗಾವಣೆ

**ಸಂದರ್ಭ: ದುರ್ನಡತೆ, ನಿರ್ಲಕ್ಷ್ಯ, ಕರ್ತವ್ಯಲೋಪ ಪ್ರಕರಣಗಳಲ್ಲಿ ಭಾಗಿಯಾದ ಅಧಿಕಾರಿಗಳನ್ನು ಸರ್ಕಾರದ ಬದಲು ಪೊಲೀಸ್ ಸಿಬ್ಬಂದಿ ಮಂಡಳಿ ಮೂಲಕವೇ ವರ್ಗಾವಣೆ ಮಾಡಲು ಅವಕಾಶ ನೀಡುವ ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆಗೆ ವಿಧಾನ ಪರಿಷತ್ ಬುಧವಾರ ಅನುಮೋದನೆ ನೀಡಿತು.**

- ತಿದ್ದುಪಡಿ ಮಸೂದೆ ಮಂಡಿಸಿದ ಗೃಹ ಸಚಿವ ಜಿ.ಪರಮೇಶ್ವರ, 'ಸರ್ಕಲ್ ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್, ಡಿವೈಎಸ್‌ಪಿ ಹಂತದವರೆಗಿನ ಅಧಿಕಾರಿಗಳಿಗೆ ಮಾತ್ರ ಇದು ಅನ್ವಯವಾಗಲಿದೆ. ಸರ್ಕಾರದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ವಿಳಂಬವಾಗುತ್ತಿತ್ತು. ಮಂಡಳಿಗೆ ಅಧಿಕಾರ ನೀಡುವುದರಿಂದ ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿದೆ' ಎಂದು ತಿಳಿಸಿದರು.
- ಕಾರ್ಯನಿರ್ವಾಹಕೇತರ ಹುದ್ದೆಗೆ ವರ್ಗಾವಣೆ ಮಾಡುವ ಕೆಲಸವನ್ನಷ್ಟೇ ಮಂಡಳಿಯು ಮಾಡಲಿದೆ. ಆರೋಪಗಳ ಬಗ್ಗೆ, ತನಿಖೆ ನಡೆಸಿ ಶಿಸ್ತುಕ್ರಮಕೈಗೊಳ್ಳುವ ಅಧಿಕಾರ ಸರ್ಕಾರದ ಬಳಿಯೇ ಇರಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

## ❖ ಮರ್ಯಾದೆಗೇಡು ಹತ್ಯೆ ನಿಷೇಧ ಮಸೂದೆ ಮಂಡನೆ

**ಸಂದರ್ಭ: ಜಾತಿ ಮೀರಿ ಪ್ರೀತಿಸುವ, ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶದ 'ಇವ ನಮ್ಮವ, ಇವ ನಮ್ಮವ' ಮಸೂದೆಯನ್ನು ಬುಧವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.**

- ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮರ್ಯಾದೆಗೇಡು ಹತ್ಯೆ' ಹೆಸರಿನಲ್ಲಿ ನಡೆದ ಕೊಲೆ, ದೌರ್ಜನ್ಯಗಳ ಬಗ್ಗೆ, ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಇಂತಹ ಕೃತ್ಯಗಳ ತಡೆಗೆ ಕಠಿಣ ಕಾನೂನು ತರಬೇಕೆಂದು ನಾಗರಿಕರು, ವಿವಿಧ ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ಹೇರಿದ್ದವು.
- ಕಾಯ್ದೆ ರೂಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಭರವಸೆಯಂತೆ 'ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ-2026' ಸಿದ್ಧಪಡಿಸಲಾಗಿದ್ದು, ಈಚೆಗೆ ಸಂಪುಟ ಸಭೆಯಲ್ಲೂ ಅನುಮೋದನೆ ಪಡೆಯಲಾಗಿತ್ತು.
- ಮಸೂದೆಯು ಅಂತರ್ಜಾತಿ ವಿವಾಹಗಳನ್ನು ಮಾನ್ಯಮಾಡುವುದು, ಅಂತಹ ಮದುವೆಯಾದವರಿಗೆ ತಾರತಮ್ಯ ಮಾಡುವುದರ ವಿರುದ್ಧ ರಕ್ಷಣೆ ಒದಗಿಸುವುದು, ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿ ದೌರ್ಜನ್ಯ ಎಸಗುವ, ಹತ್ಯೆ ಮಾಡುವ ಕೃತ್ಯಗಳನ್ನು ತಡೆಯುವುದು, ಮೇಲ್ವಿಚಾರಣಾ ಸಮಿತಿಗಳನ್ನು ರಚಿಸುವುದು, ಪ್ರತಿ ಜಿಲ್ಲೆಯಲ್ಲೂ, 'ಇವ ನಮ್ಮವ' ವೇದಿಕೆಗಳನ್ನು ರಚಿಸುವುದು, ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸುವುದು ಅಪರಾಧಿಗಳಿಗೆ ಐದು ವರ್ಷಗಳಿಗೆ ಕಡಿಮೆ ಇಲ್ಲದಂತಹ ಕಠಿಣ ಶಿಕ್ಷೆ ವಿಧಿಸಲು ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.
- ಪ್ರಾದೇಶಿಕ ಅಸಮತೋಲನಾ ನಿವಾರಣಾ ಆಯೋಗ ಸಲ್ಲಿಸಿದ ವರದಿ ಹಾಗೂ ಕರ್ನಾಟಕ ವೃತ್ತಿಗಳ ಕಸುಬುಗಳ, ಅಜೀವಿಕೆಗಳ ಮತ್ತು ಉದ್ಯೋಗ ಮೇಲಣ ತೆರಿಗೆ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು.

## ❖ ಕೈಗಾರಿಕಾ ಪಾರ್ಕ್‌ಗಳ ನಿರ್ಮಾಣಕ್ಕೆ 233,660 ಕೋಟಿಗೆ ಅನುಮೋದನೆ L 15 ಲಕ್ಷ ನೇರ ಉದ್ಯೋಗ ಸೃಷ್ಟಿ ನಿರೀಕ್ಷೆ: 'ಭವ್ಯ' ಯೋಜನೆಗೆ ಕೇಂದ್ರ ಅಸ್ತು

**ಸಂದರ್ಭ: ದೇಶದಲ್ಲಿ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು 'ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ'ಗೆ (ಭವ್ಯ) ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದೆ.**

- ಈ ಯೋಜನೆಯ ಅಡಿ ಬಳಕೆಗೆ ಸಿದ್ಧವಾಗಿರುವ 100 ಕೈಗಾರಿಕಾ ಪಾರ್ಕ್‌ಗಳನ್ನು ದೇಶದ ವಿವಿಧೆಡೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 33,660 ಕೋಟಿ ವ್ಯಯಿ ಸಲು ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಈ ಯೋಜನೆಯಿಂದ 15 ಲಕ್ಷ ನೇರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.
- 'ವಿಶ್ವದರ್ಜೆಯ ಕೈಗಾರಿಕಾ ಮೂಲಸೌಕರ್ಯವನ್ನು ಈ ಯೋಜನೆಯ ಅಡಿ ಅಭಿವೃದ್ಧಿ ಮಾಡಲಾಗುವುದು ತಯಾರಿಕಾ ಘಟಕಗಳಲ್ಲಿ ಗರಿಷ್ಠ ಮಟ್ಟದ ಉತ್ಪಾದನೆ, ದಕ್ಷತೆ ಮತ್ತು ನಾವೀನ್ಯತೆ ಇರಲಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದ್ದಾರೆ.
- ಈ ಪಾರ್ಕ್‌ಗಳು ರಸ್ತೆಗಳು, ನೀರು, ವಿದ್ಯುತ್, ಚರಂಡಿಗಳು, ಐಸಿಟಿ ಸೇರಿದಂತೆ ಪ್ರಮುಖ ಮೂಲಸೌಕರ್ಯ ಗಳನ್ನು ಹೊಂದಿರಲಿವೆ. ಇದರ ಜೊತೆಗೆ ಪರೀಕ್ಷಾ ಪ್ರಯೋಗಾಲಯಗಳು, ಗೋದಾಮು, ಕಾರ್ಮಿಕರಿಗೆ ವಸತಿ ಸೌಕರ್ಯ ಮತ್ತು ಇತರೆ ಸೌಲಭ್ಯಗಳು ಇರಲಿವೆ.
- ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮದ (ಎನ್‌ಐಸಿಡಿಪಿ) ಅಡಿಯಲ್ಲಿ ಅಭಿವೃದ್ಧಿ ಪಡಿಸಲಾದ ಕೈಗಾರಿಕಾ ಸ್ಮಾರ್ಟ್ ಸಿಟಿಗಳ ಯಶಸ್ಸಿನ ಆಧಾರದ ಮೇಲೆ, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಖಾಸಗಿ ವಲಯದ ಪಾಲುದಾರರ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ವೈಷ್ಣವ್ ಹೇಳಿದ್ದಾರೆ.
- ನಿಯಮಗಳ ಸಡಿಲಗೊಳಿಸುವಿಕೆ, ತ್ವರಿತವಾಗಿ ಯೋಜನೆಗಳಿಗೆ ಅನುಮೋದನೆ ನೀಡುವುದು, ಏಕಗವಾಕ್ಷಿ ವ್ಯವಸ್ಥೆಯನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರುವುದು ಮತ್ತು ರಾಜ್ಯಗಳಿಂದ ಹೂಡಿಕೆದಾರ ಸ್ನೇಹಿ ಸುಧಾರಣೆಗಳ ಜಾರಿ ಮೂಲಕ ಸುಲಲಿತ ವಹಿವಾಟು ಸಾಧ್ಯವಾಗುವಂತೆ ಮಾಡುವ ಉದ್ದೇಶವನ್ನು 'ಭವ್ಯ' ಯೋಜನೆಯು ಹೊಂದಿದೆ ಎಂದು ತಿಳಿಸಿದ್ದಾರೆ.
- ಹೊಸ ಯೋಜನೆಯು ಬಳಕೆಗೆ ಸಿದ್ಧವಾಗಿರುವ ಕೈಗಾರಿಕಾ ಮೂಲ ಸೌಕರ್ಯವನ್ನು ಬಯಸುವ ತಯಾರಿಕಾ ಘಟಕಗಳಿಗೆ, ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ, ನವೋದ್ಯಮಗಳಿಗೆ, ಜಾಗತಿಕ ಹೂಡಿಕೆದಾರರಿಗೆ ನೇರವಾಗಿ ಅನುಕೂಲ ಮಾಡಿಕೊಡಲಿದೆ.

## ❖ ₹2,585 ಕೋಟಿ ವೆಚ್ಚದ ಕಿರು ಜಲ ವಿದ್ಯುತ್ ಅಭಿವೃದ್ಧಿ ಯೋಜನೆ: ಕೇಂದ್ರದ ಒಪ್ಪಿಗೆ

**ಸಂದರ್ಭ: ₹2,585 ಕೋಟಿ ವೆಚ್ಚದ ಕಿರು ಜಲ ವಿದ್ಯುತ್ ಅಭಿವೃದ್ಧಿ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. 1,500 ಮೆಗಾ ವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಅಭಿವೃದ್ಧಿಯ ಉದ್ದೇಶ ಇದಾಗಿದೆ.**

- 'ನದಿ ಹರಿಯುವ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸದೆ, ಜನರನ್ನು ಸ್ಥಳಾಂತರ ಮಾಡದೇ ವಿದ್ಯುತ್ ಉತ್ಪಾದಿಸುವ ಯೋಜನೆ ಇದು ದೇಶದ 7,133 ಸ್ಥಳಗಳಲ್ಲಿ 21,000 ಮೆ.ವಾ ವಿದ್ಯುತ್ ಉತ್ಪಾದಿಸುವ ಸಣ್ಣ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಅವಕಾಶ ಇದೆ. ಒಂದು ಘಟಕದಿಂದ 1 ಮೆಗಾ ವಾಟ್‌ನಿಂದ 25 ಮೆಗಾ ವಾಟ್ವರೆಗೂ ವಿದ್ಯುತ್ ಉತ್ಪಾದಿಸಬಹುದಾಗಿದೆ' ಎಂದು ಸಚಿವ ಆಶ್ವಿನಿ ವೈಷ್ಣವ್ ಅವರು ತಿಳಿಸಿದರು.
- 'ಮುಂದಿನ ಐದು ವರ್ಷಗಳಲ್ಲಿ (2030-31) ಯೋಜನೆಗಳನ್ನು ಅನುಷ್ಠಾನಗೊಳಿಸಲಿದ್ದು, ₹ 15,000 ಹೂಡಿಕೆ ಆಕರ್ಷಿಸುವ ಸಾಧ್ಯತೆ ಇದೆ. ಗರಿಷ್ಠ 30 ಕೋಟಿ ವೆಚ್ಚದ ಒಂದು ಯೋಜನೆಗೆ ಕೇಂದ್ರ ಸರ್ಕಾರ ಯೋಜನಾ ವೆಚ್ಚದ ಶೇ.30ರಷ್ಟು ಆರ್ಥಿಕ ನೆರವು ನೀಡಲಿದೆ' ಎಂದರು. ಸದ್ಯ ದೇಶದಲ್ಲಿ ಸಣ್ಣ ಜಲ ವಿದ್ಯುತ್ ಯೋಜನೆಗಳಿಂದ 5,100 ಮೆ.ವಾ ವಿದ್ಯುತ್ ಉತ್ಪಾದಿಸಲಾಗುತ್ತಿದೆ.
- 100 ಎಕರೆಯಿಂದ 1 ಸಾವಿರ ಎಕರೆಯವರೆಗಿನ ವಿಸ್ತೀರ್ಣದ ಕೈಗಾರಿಕಾ ಪಾರ್ಕ್‌ಗಳ ಅಭಿವೃದ್ಧಿಗೆ ಪ್ರತಿ ಎಕರೆಗೆ 1 ಕೋಟಿ ಹಣಕಾಸಿನ ನೆರವನ್ನು ಈ ಯೋಜನೆಯ ಅಡಿಯಲ್ಲಿ ನೀಡಲಾಗುತ್ತದೆ.

## ❖ ಪಿಎನ್‌ಜಿಗೆ ಆದ್ಯತೆ ನೀಡಿದರೆ ಹೆಚ್ಚು ಎಲ್‌ಪಿಜಿ

**ಸಂದರ್ಭ: ಕೊಳವೆ ಮೂಲಕ ಅನಿಲ ಪೂರೈಕೆ ಮಾಡುವ ಜಾಲದ ನಿರ್ಮಾಣ ಕಾರ್ಯಕ್ಕೆ ವೇಗ ನೀಡುವ ರಾಜ್ಯಗಳಿಗೆ ವಾಣಿಜ್ಯ ಬಳಕೆ ಎಲ್‌ಪಿಜಿ ವಿತರಣೆಯನ್ನು ಹೆಚ್ಚು ಮಾಡಲಾಗುತ್ತದೆ ಎಂಬ ಭರವಸೆಯನ್ನು ಕೇಂದ್ರ ಸರ್ಕಾರ ಬುಧವಾರ ನೀಡಿದೆ.**

- ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ದೇಶಕ್ಕೆ ಎಲ್‌ಪಿಜಿ ಪೂರೈಕೆಯಲ್ಲಿ ಸಮಸ್ಯೆ ಸೃಷ್ಟಿಯಾಗಿದೆ. ಕೇಂದ್ರ ಸರ್ಕಾರವು ಮನೆಗಳಿಗೆ ಅಡುಗೆ ಮಾಡಲು ಎಲ್‌ಪಿಜಿ ಪೂರೈಕೆಗೆ ಆದ್ಯತೆ ನೀಡಿದೆ. ಹೋಟೆಲ್‌ನಂತಹ ವಾಣಿಜ್ಯ ಘಟಕಗಳಿಗೆ ಎಲ್ ಪಿಜಿ ಪೂರೈಕೆಯನ್ನು ಆರಂಭದಲ್ಲಿ ಸ್ಥಗಿತಗೊಳಿಸಲಾಗಿತ್ತು ಈಗ ವಾಣಿಜ್ಯ ಘಟಕಗಳ ಬೇಡಿಕೆಯ ಶೇ 20ರಷ್ಟನ್ನು ಪೂರೈಕೆ ಮಾಡಲಾಗುತ್ತಿದೆ.
- ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಸುವ ಮೂಲಸೌಕರ್ಯ ಕಲ್ಪಿಸುವ ಕೆಲಸಕ್ಕೆ ಚುರುಕು ನೀಡುವ ರಾಜ್ಯಗಳಿಗೆ ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆಯನ್ನು ಶೇ 30ಕ್ಕೆ ಹೆಚ್ಚು ಮಾಡುವುದಾಗಿ ಕೇಂದ್ರ ಹೇಳಿದೆ. ಕೊಳವೆ ಮೂಲಕ ನೈಸರ್ಗಿಕ ಅನಿಲವನ್ನು ಮನೆಗಳಿಗೂ ವಾಣಿಜ್ಯ ಬಳಕೆಗೂ ಪೂರೈಕೆ ಮಾಡಲಾಗುತ್ತದೆ.
- ಎಲ್‌ಪಿಜಿ ಪೂರೈಕೆಗೆ ಸಮಸ್ಯೆ ಆಗಿದೆ. ಆದರೆ ಮನೆಗಳಿಗೆ ಹಾಗೂ ಕೈಗಾರಿಕೆಗಳಿಗೆ ಪಿಎನ್‌ಜಿ ಪೂರೈಕೆಯು ಅಬಾಧಿತವಾಗಿ ಮುಂದುವರಿದಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.
- 'ನಗರ ಅನಿಲ ವಿತರಣಾ (ಸಿಜಿಡಿ) ಜಾಲ ಇರುವಲ್ಲೆಲ್ಲ ಎಲ್‌ಪಿಜಿ ಬಳಕೆದಾರರು ಪಿಎನ್‌ಜಿ ಬಳಕೆ ಆರಂಭಿಸಬೇಕು' ಎಂದು ಅವರು ಹೇಳಿದರು. ಪಿಎನ್‌ಜಿ ಜಾಲ ಅಳವಡಿಕೆಗೆ ಅನುಮತಿ ಕೋರಿ ಸಲ್ಲಿಕೆ ಯಾಗಿರುವ ಹಳೆಯ ಅರ್ಜಿಗಳಿಗೆ ಪರಿಭಾವಿತ ಅನುಮತಿ ನೀಡಿದರೆ, ಹೊಸ ಅರ್ಜಿಗಳಿಗೆ 24 ಗಂಟೆಗಳಲ್ಲಿ ಒಪ್ಪಿಗೆ ನೀಡಿದರೆ, ವಾರ್ಷಿಕ ಬಾಡಿಗೆ/ಲೀಸ್ ಶುಲ್ಕ ತನ್ನಿಸಿದರೆ ಅಂತಹ ರಾಜ್ಯಗಳಿಗೆ ಶೇ 10ರಷ್ಟು ಹೆಚ್ಚು ವಾಣಿಜ್ಯ ಎಲ್‌ಪಿಜಿ ಪೂರೈಸ ಲಾಗುತ್ತದೆ ಎಂದು ಸುಜಾತಾ ಅವರು ತಿಳಿಸಿದರು.
- ಎಲ್‌ಪಿಜಿ ಪೂರೈಕೆ ಕುರಿತ ಪ್ರಶ್ನೆ ಅವರು, 'ದೇಶದಲ್ಲಿ ಎಲ್ಲಿಯೂ ಎಲ್ ಪಿಜಿ ಖಾಲಿಯಾದ ವರದಿ ಇಲ್ಲ. ಆದರೆ ಪೂರೈಕೆ ಮಟ್ಟ ಕಳವಳಕಾರಿ ಆಗಿಯೇ ಇದೆ ಆಮದು ಮಾಡಿ ಕೊಳ್ಳುವುದಕ್ಕೆ ಅಡಚಣೆ ಉಂಟಾಗಿದೆ ಎಂದರು.

## ❖ 'ದಿವ್ಯಾಂಗ ಶಕ್ತಿ' ಯೋಜನೆಗೆ ಚಾಲನೆ

**ಸಂದರ್ಭ: ಅಂಗವಿಕಲರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸುವ 'ದಿವ್ಯಾಂಗ ಶಕ್ತಿ' ಯೋಜನೆಗೆ ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಬುಧವಾರ ಇಲ್ಲಿ ಚಾಲನೆ ನೀಡಿದರು. ಯುಗಾದಿ ಹಬ್ಬದ ವಿಶೇಷ ಉಡುಗೊರೆಯಾಗಿ ಘೋಷಿಸಲಾದ ಈ ಯೋಜನೆಯು ಸಾಮಾಜಿಕ ಸಮಾನತೆ, ಸಂಚಾರ ಸೌಲಭ್ಯ ಮತ್ತು ಕಟ್ಟಕಡೆಯ ವ್ಯಕ್ತಿಗೂ ಘನತೆಯ ಬದುಕು ನೀಡುವ ಗುರಿ ಹೊಂದಿದೆ.**

- ಯೋಜನೆಯು 21 ಅಂಗವೈಕಲ್ಯ ಇರುವವರನ್ನು ಒಳಗೊಳ್ಳಲಿದ್ದು, ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದ (ಎಪಿಎಸ್‌ಆರ್‌ಟಿಸಿ) ಐದು ವಿಧದ ಬಸ್‌ಗಳಲ್ಲಿ ಉಚಿತ ಪ್ರಯಾಣದ ಜೊತೆಗೆ, ಅವರ ಸಹಾಯಕರಿಗೆ ಶೇ 50ರಷ್ಟು ರಿಯಾಯಿತಿ ನೀಡುತ್ತದೆ.

### ❖ 'ಪತ್ನಿ ಸೇವಕಿಯಲ್ಲ, ಪತಿಯೂ ಮನೆಗೆಲಸದಲ್ಲಿ ಪಾಲುದಾರ'

**ಸಂದರ್ಭ: ಪತ್ನಿಯು ಪರಿಚಾರಕಿಯಲ್ಲ, ಜೀವನ ಸಂಗಾತಿ, ಅಡುಗೆ ಮಾಡುವುದು, ಮನೆ ಸ್ವಚ್ಛತೆ ಮತ್ತು ಬಟ್ಟೆ ಒಗೆಯುವುದು ಸೇರಿದಂತೆ ಮನೆಗೆಲಸಗಳನ್ನು ಪತ್ನಿಗೆ ಸಮನಾಗಿ ಪತಿಯೂ ಮಾಡಬೇಕು' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.**

- ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವೊಂದನ್ನು ಪ್ರಶ್ನಿಸಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು ಈ ಅಭಿಪ್ರಾಯಪಟ್ಟಿದೆ.
- ಕಿರುಕುಳದ ಕಾರಣ ಹೇಳಿ, ವ್ಯಕ್ತಿಯೊಬ್ಬರುವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅದನ್ನು ವಿಚಾರಣಾ ನ್ಯಾಯಾಲಯವು ಮಂಜೂರು ಮಾಡಿತ್ತು. ಆದರೆ, ಹೈಕೋರ್ಟ್ ಅದನ್ನು ವಜಾಗೊಳಿಸಿತ್ತು. 2017ರಲ್ಲಿ ಮದುವೆಯಾಗಿದ್ದ ದಂಪತಿ, 2019ರಿಂದ ಪ್ರತ್ಯೇಕವಾಗಿದ್ದರು.
- 'ಕಿರುಕುಳ ಏನು?' ಎಂದು ಸುಪ್ರೀಂ ಕೋರ್ಟ್ ಪೀಠವು ಅರ್ಜಿದಾರರ ಪರ ವಕೀಲರನ್ನು ಪಶ್ನಿಸಿತು. ಗಿಆಕೆ ಅನುಚಿತವಾಗಿ ವರ್ತಿಸುತ್ತಿದ್ದು, ಅಡುಗೆ ಮಾಡುತ್ತಿಲ್ಲ' ಎಂದು ವಕೀಲರು ತಿಳಿಸಿದರು.
- 'ಕಾಲ ಬದಲಾಗಿದೆ. ನೀವೂ ಮನೆ ಕೆಲಸಗಳಲ್ಲಿ ಸರಿ ಸಮಾನವಾಗಿ ಭಾಗವಹಿಸ ಬೇಕು. ಹೈಕೋರ್ಟ್ ಸರಿಯಾದ ಆದೇಶ ನೀಡಿದೆ' ಎಂದು ನ್ಯಾಯಮೂರ್ತಿ ವಿಕ್ರಮ್ ನಾಥ್ ಹೇಳಿದರು.
- 'ಇಬ್ಬರೂ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಬ್ಬರನ್ನೂ ಕರೆಸಿ, ಅವರೊಂದಿಗೆ ಮಾತನಾಡುತ್ತೇವೆ' ಎಂದು ಸೂಚಿಸಿದ ಪೀಠ, ಏಪ್ರಿಲ್ 27ಕ್ಕೆ ವಿಚಾರಣೆಯನ್ನು ಮುಂದೂಡಿ, ಖುದ್ದು ಹಾಜರಾಗಲು ಸೂಚಿಸಿತು.





ಪ್ರವಾಸೋದ್ಯಮ, ಕುಡಿಯುವ ನೀರು, ನೀರಾವರಿ, ವಿದ್ಯುತ್ ಉತ್ಪಾದನೆ, ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಸರ್ಕಾರಗಳು (ರಾಜ್ಯ ಮತ್ತು ಕೇಂದ್ರ) ಬೃಹತ್ ಯೋಜನೆಗಳನ್ನು ಕೈಗೆತ್ತಿಕೊಂಡಿವೆ. ಇನ್ನೂ ಕೆಲವು ಯೋಜನೆಗಳನ್ನು ಜಾರಿಗೊಳಿಸಲು ಉದ್ದೇಶಿಸಿವೆ. ಆದರೆ, ಬಹುಪಾಲು ಯೋಜನೆಗಳು ಸೂಕ್ಷ್ಮವಾದ ಪರಿಸರಕ್ಕೆ ಹಾನಿ ಉಂಟು ಮಾಡಲಿವೆ ಎಂದು ಆರೋಪಿಸುತ್ತಿರುವ ಸ್ಥಳೀಯ ರೈತರು, ಪರಿಸರವಾದಿಗಳು, ಸಾರ್ವಜನಿಕರು ಈ ಯೋಜನೆಗಳನ್ನು ವಿರೋಧಿಸುತ್ತಿದ್ದಾರೆ. ಪ್ರತಿರೋಧದ ನಡುವೆಯೂ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರಗಳು ಪಣ ತೊಟ್ಟಿವೆ. ಇಂತಹ ಪ್ರಮುಖ ಯೋಜನೆಗಳು, ಅವುಗಳನ್ನು ಜನರು ವಿರೋಧಿಸಲು ಕಾರಣವೇನು ಎನ್ನುವ ವಿವರಗಳು ಇಲ್ಲಿವೆ

# ಯೋಜನೆಗಳ ಸಾಲು ಸೂಕ್ಷ್ಮ ಪರಿಸರಕ್ಕೆ ಸವಾಲು

ತುಮಕೂರಿನಲ್ಲಿ ನಡೆಯುತ್ತಿರುವ ಎತ್ತಿನಹೊಳೆ ಕಾಮಗಾರಿ

## ಎತ್ತಿನಹೊಳೆ: ಹರಿಯದ ನೀರು

**ಪಶ್ಚಿಮ** ಘಟ್ಟದ ಮೇಲ್ಭಾಗದಲ್ಲಿ ಹುಟ್ಟುವ ಎತ್ತಿನಹೊಳೆ, ಕಾಡುಮನೆ ಹೊಳೆ, ಕೇರಿಹೊಳೆ, ಹೊಂಗಡಹಳ್ಳ ಸಹಿತ ಎಂಟು ಹೊಳೆಗಳಿಂದ ಮಳೆಗಾಲದಲ್ಲಿ ಹರಿಯುವ ಹೆಚ್ಚುವರಿ ನೀರನ್ನು (ಸುಮಾರು 24.01 ಟಿಎಂಸಿ ಅಡಿ) ಪಂಪ್ ಮಾಡಿ, ಗುರುತ್ವ ಕಾಲುವೆ ಮೂಲಕ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ತಲುಪಿಸುವುದು ಎತ್ತಿನಹೊಳೆ ಯೋಜನೆಯ ಮುಖ್ಯ ಗುರಿ.

2013-14ನೇ ಸಾಲಿನಲ್ಲಿ ಕಾಮಗಾರಿ ಆರಂಭಿಸಿದ್ದು, 14 ವರ್ಷ ಕಳೆದರೂ ಈ ಯೋಜನೆ ಪೂರ್ಣಗೊಂಡಿಲ್ಲ. 2027ರ ಅಕ್ಟೋಬರ್ ವೇಳೆಗೆ ಪೂರ್ಣಗೊಳಿಸಿ ತುಮಕೂರಿನ ಕೆರೆಗಳಿಗೆ ನೀರು ಹರಿಸುವುದಾಗಿ ಹೇಳಲಾಗುತ್ತಿದೆ. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯಲ್ಲಿ ಕಾಮಗಾರಿ ಆರಂಭವಾಗಿಲ್ಲ. ಪ್ರಾರಂಭದಲ್ಲಿ ಯೋಜನೆಯ ಅಂದಾಜು ವೆಚ್ಚ ₹8,323 ಕೋಟಿ ಇತ್ತು, ಈಗ ₹25 ಸಾವಿರ ಕೋಟಿ ದಾಟಿದೆ. ಪೂರ್ಣಗೊಳ್ಳುವ ಹೊತ್ತಿಗೆ ಇನ್ನೂ ₹10 ಸಾವಿರ ಕೋಟಿ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. 252 ಕಿ.ಮೀ. ಉದ್ದದ ಕಾಲುವೆಯಲ್ಲಿ ಕೇವಲ 164 ಕಿ.ಮೀ ನಷ್ಟು ಕಾಮಗಾರಿ ಮುಗಿದಿದ್ದು, ಅರಣ್ಯ ಮತ್ತು ಭೂಸ್ವಾಧೀನ ಸಮಸ್ಯೆಗಳು ಮುಂದುವರಿದಿವೆ. ಈಚೆಗೆ ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ.

ಈ ಯೋಜನೆಯಿಂದಾಗಿ ಸಕಲೇಶಪುರ ವ್ಯಾಪ್ತಿಯ ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಹಾನಿ, ಅರಣ್ಯ ನಾಶ ಮತ್ತು ಜೀವ ವೈವಿಧ್ಯ ಕಡಿಮೆಯಾಗುವುದನ್ನು ಪರಿಸರವಾದಿಗಳು ಪದೇ ಪದೇ ತೋರಿಸಿದ್ದಾರೆ. ಸ್ಥಳೀಯರು ಯೋಜನೆಯ ವಿರುದ್ಧ ಪ್ರತಿಭಟಿಸುತ್ತಲೇ ಇದ್ದಾರೆ. ಹಲವಾರು ಕಡೆಗಳಲ್ಲಿ ಭೂಕುಸಿತ ಉಂಟಾಗಿದ್ದು, ರಸ್ತೆ, ಕಾಫಿ ತೋಟಗಳು ಸಂಪೂರ್ಣ ನಾಶವಾಗಿವೆ.

## ಕೆಆರ್‌ಎಸ್: 'ಕಾವೇರಿ'ದ ಆರತಿ

**ಮೈಸೂರು** ಮತ್ತು ಮಂಡ್ಯದ ಕೃಷಿ ಚಟುವಟಿಕೆಗಳಿಗೆಂದೇ ನಿರ್ಮಾಣವಾಗಿ, ಈಗ ಬೆಂಗಳೂರಿಗೂ ಕುಡಿಯುವ ನೀರು ಪೂರೈಸುತ್ತಿರುವ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ಬಳಿ 'ಕಾವೇರಿ ಆರತಿ' ನಡೆಸುವುದಕ್ಕೆ ರೈತ ಸಂಘಟನೆಗಳಿಂದ ವ್ಯಾಪಕ ವಿರೋಧವಿದೆ. ಈ ವಿರೋಧದ ನಡುವೆಯೂ 2025ರ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರ್ಕಾರ ಅದ್ದೂರಿಯಾಗಿ 'ಕಾವೇರಿ ಆರತಿ' ನಡೆಸಿದೆ.

ಜಲಾಶಯದ ಬಳಿ 'ಕಾವೇರಿ ಆರತಿ' ನಡೆಸಲು ₹92.3 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸುವ ಹಾಗೂ ₹2,663 ಕೋಟಿ ಮೊತ್ತದಲ್ಲಿ196 ಎಕರೆ ಪ್ರದೇಶದಲ್ಲಿ 'ಅಮ್ಯೂಸ್‌ಮೆಂಟ್ ಪಾರ್ಕ್' ನಿರ್ಮಿಸುವ ರಾಜ್ಯ ಸರ್ಕಾರದ ಕ್ರಮ ರೈತರನ್ನು ಕೆರಳಿಸಿದೆ. ಕೆಆರ್‌ಎಸ್ ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ಜಲಾಶಯದ ಬಳಿ ಯಾವುದೇ ಅಭಿವೃದ್ಧಿ ಚಟುವಟಿಕೆ ಬೇಡ ಎಂಬುದು ರೈತರ ಆಗ್ರಹ. ಆದರೆ ರಾಜ್ಯ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿದಿಲ್ಲ.

ಎರಡೂ ಯೋಜನೆಗಳನ್ನು ವಿರೋಧಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದೆ.

## ಕ್ರಷರ್‌ಗೆ ಅನುಮತಿ ಪಡೆಯಲು ಲಾಬಿ

**ಕಪ್ಪತಗುಡ್ಡವನ್ನು** ವನ್ಯಜೀವಿಧಾಮ ಎಂದು ಘೋಷಣೆ ಮಾಡಿದ ನಂತರ ಗಣಿಗಾರಿಕೆಗೆ ತಡೆ ಬಿದ್ದಿದೆ. ಆದರೆ, ವನ್ಯಜೀವಿಧಾಮದ ಗಡಿ ಪರಿಷ್ಕರಣೆ ಮಾಡಿ ಕಲ್ಲು ಕ್ರಷರ್ ಘಟಕಗಳ ಕಾರ್ಯಾಚರಣೆಗೆ ಅನುಮತಿ ನೀಡಬೇಕು ಎಂದು ಈಗಲೂ ಕೆಲವು ಗಣಿ ಮಾಲೀಕರು ಲಾಬಿ ನಡೆಸುತ್ತಲೇ ಬಂದಿದ್ದಾರೆ.

ವನ್ಯಜೀವಿಧಾಮದ 322 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಕೇಂದ್ರ ಪರಿಸರ ಸಚಿವಾಲಯು 2025ರ ಜೂನ್ 4ರಂದು ಅಧಿಸೂಚನೆ ಹೊರಡಿಸಿತ್ತು. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಈಗಿರುವ ಹಾಗೂ ಹೊಸ ವಾಣಿಜ್ಯ ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕ್ರಷರ್‌ಗಳನ್ನು ನಿಷೇಧಿಸಲಾಗಿದೆ. ವನ್ಯಜೀವಿಧಾಮದ ವ್ಯಾಪ್ತಿಯನ್ನು 178 ಚದರ ಕಿ.ಮೀ.ಗೆ ಇಳಿಸುವಂತೆ ಕೋರಿ ಹಲವು ಖಾಸಗಿ ಕಂಪನಿಗಳು ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿದ್ದ ಹೈಕೋರ್ಟ್, ಪರಿಸರ ಸೂಕ್ಷ್ಮವಲಯ ವ್ಯಾಪ್ತಿಯಲ್ಲಿನ ಕಲ್ಲು ಕ್ರಷರ್ ಮತ್ತು ಗಣಿಗಾರಿಕೆ ಮುಂದುವರಿಸಲು ಅನುಮತಿ ನಿರಾಕರಿಸಿ ಈಚೆಗೆ ಆದೇಶ ನೀಡಿತ್ತು.

ಚಾಮುಂಡಿಬೆಟ್ಟದ ವಿಹಂಗಮನ ನೋಟ

## ಚಾಮುಂಡಿಬೆಟ್ಟವ ಕಾಡುತ್ತಿರುವ ರೋಪ್ ವೇ 'ಗುಮ್ಮ'

**ಮೈಸೂರಿನ** ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಿಸುವ ಪ್ರಸ್ತಾವ ಈ ಹಿಂದಿನ ಬಿಜೆಪಿ ಹಾಗೂ ಈಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಇತ್ತು, ನಗರದ ಪರಿಸರವಾದಿಗಳು, ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳ ಹೋರಾಟದಿಂದಾಗಿ ಸರ್ಕಾರ ಸದ್ಯ ಮೌನವಾಗಿದೆ.

ಪರ್ವತಮಾಲಾ ಯೋಜನೆಯಡಿ ರೋಪ್ ವೇ ನಿರ್ಮಾಣದ ತಯಾರಿಯನ್ನು ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ ಮಾಡಿತ್ತು. 'ಚಾಮುಂಡಿ ಬೆಟ್ಟ ಉಳಿಸಿ ಸಮಿತಿ' ನೇತೃತ್ವದಲ್ಲಿ ಮೈಸೂರಿಗರು ಒಕ್ಕೊರಲಿನಿಂದ ನಡೆಯನ್ನು ಖಂಡಿಸಿದ್ದರು. ಸಹಿ ಸಂಗ್ರಹ ಚಳವಳಿ ನಡೆದು, 70 ಸಾವಿರ ಜನರು ಯೋಜನೆ ವಿರೋಧಿಸಿ ಸಹಿ ಮಾಡಿದ್ದರು. 2022ರಲ್ಲಿ ಜಿಲ್ಲಾಡಳಿತವು ಚಾಮುಂಡಿಬೆಟ್ಟವು ಪ್ರವಾಸೋದ್ಯಮ ಸ್ಥಳದ ಬದಲು ಪವಿತ್ರ ತೀರ್ಥಸ್ಥಳವೆಂಬ ಮಾನ್ಯತೆ ನೀಡಿದ್ದರಿಂದ ಯೋಜನೆಯು ನನೆಗುದಿಗೆ ಬಿದ್ದಿತು.

**ಸಡಿಲ ಬೆಟ್ಟ:** ರೋಪ್ ವೇ ನಿರ್ಮಾಣಕ್ಕೆ ಬೆಟ್ಟವನ್ನು ಕೊರೆದು ಬೃಹತ್ ಕಂಬಗಳನ್ನು ನಿರ್ಮಿಸಬೇಕು. ಸಡಿಲ ಮಣ್ಣು, ಗುಲಾಬಿ ಶಿಲೆಯ ಬೆಟ್ಟವಾಗಿದ್ದು ಕುಸಿಯುವ ಅಪಾಯ ಹೆಚ್ಚಿದೆಯೆಂಬ ಅಭಿಪ್ರಾಯ ತಜ್ಞರಿಂದ ವ್ಯಕ್ತವಾಗಿತ್ತು, ಅಲ್ಲದೇ ನಂದಿ ರಸ್ತೆಯು 2021ರಲ್ಲಿ ಭಾರಿ ಮಳೆಗೆ ಕುಸಿದಿತ್ತು. 'ಪ್ರಸಾದ್' ಯೋಜನೆಯಡಿ ಅಭಿವೃದ್ಧಿ ಕಾರ್ಯಗಳು ಮುಂದುವರಿದಿದ್ದು, ಬೆಟ್ಟದ ಧಾರಣಾ ಸಾಮರ್ಥ್ಯ ಕುಸಿಯುತ್ತಿದೆ ಎಂಬ ಆತಂಕವನ್ನು ಭೂವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. 'ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ವರದಿ'ಯನ್ನು ಜಿಲ್ಲಾಡಳಿತ ಇದುವರೆಗೂ ಸಿದ್ಧಪಡಿಸಿಲ್ಲ. ಆದರೆ, ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಿದೆ.

## ಕಳಸಾ–ಬಂಡೂರಿ: ಪರ ವಿರೋಧ

**ಬೆಳಗಾವಿ**, ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ನೀರು ಪೂರೈಸುವ ಉದ್ದೇಶದಿಂದ ಕೈಗೆತ್ತಿಕೊಂಡಿರುವ ಕಳಸಾ-ಬಂಡೂರಿ ನಾಲೆ ತಿರುವು ಯೋಜನೆ, ಖಾನಾಪುರದ ದಟ್ಟ ಅರಣ್ಯದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಯೋಜನೆ. ಇದಕ್ಕೆ ಸಂಬಂಧಿಸಿದ ಕಾಮಗಾರಿಗಳು ಅಲ್ಲಲ್ಲಿ ನಡೆದಿವೆ.

ಪರಿಸರವಾದಿಗಳು, ಗೋವಾ ಸರ್ಕಾರದ ವಿರೋಧ ಇದ್ದರೂ ರಾಜ್ಯ ಸರ್ಕಾರ ಈ ಯೋಜನೆ ಅನುಷ್ಠಾನಕ್ಕೆ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಬೆಳಗಾವಿ ಸೇರಿದಂತೆ ಯೋಜನೆ ವ್ಯಾಪ್ತಿಗೆ ಬರುವ ಜಿಲ್ಲೆಗಳ ರೈತರು ಕೂಡ ಯೋಜನೆ ಅನುಷ್ಠಾನಕ್ಕೆ ಒತ್ತಡ ಹಾಕುತ್ತಿದ್ದಾರೆ. ಆದರೆ, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಅನುಮತಿ ಸಿಕಿಲ್ಲ.

'ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಅನುಮತಿ ಸಿಗದ್ದರಿಂದ ಯೋಜನೆ ಸ್ಥಗಿತವಾಗಿದೆ' ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, 'ಯೋಜನಾ ಪ್ರದೇಶದಲ್ಲಿ ಕದ್ದುಮುಚ್ಚಿ ಕೆಲಸ ಮಾಡಲಾಗುತ್ತಿದೆ' ಎಂದು ಗೋವಾ ಸರ್ಕಾರ ತಕರಾರು ತೆಗೆದಿದೆ.

ಪರಿಸರ ವಾದಿಗಳು ಯೋಜನೆ ಬೇಡ ಎಂದು ಹೇಳಿದರೆ ರೈತರು ಯೋಜನೆ ಪರವಾಗಿದ್ದಾರೆ.

## ನಂದಿಬೆಟ್ಟಕ್ಕೆ ರೋಪ್ ವೇ

**ರಾಜ್ಯದಲ್ಲಿ** ನಿರ್ಮಾಣವಾಗುತ್ತಿರುವ ಮೊದಲ ರೋಪ್ ವೇ ಯೋಜನೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ 'ನಂದಿ ಬೆಟ್ಟದ ರೋಪ್ ವೇ' ಯೋಜನೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯ ₹97.3 ಕೋಟಿ ವೆಚ್ಚದ ಯೋಜನೆ ಇದು.

ನಂದಿ ಬೆಟ್ಟ

ಡೈನಮಿಕ್ಸ್ ರೋಪ್ ವೇ ಸಂಸ್ಥೆಗೆ 30 ವರ್ಷ ನಿರ್ವಹಣೆಯ ಜವಾಬ್ದಾರಿ ನೀಡಲಾಗಿದೆ.

ಈ ಯೋಜನೆಯು ದಶಕಗಳಿಂದಲೂ ಚರ್ಚೆಯಲ್ಲಿತ್ತು. 2023ರಲ್ಲಿ ಕಾಮಗಾರಿ ಆರಂಭವಾಯಿತು. ಆದರೆ ನಾನಾ ಅಡಚಣೆಗಳಿಂದ ಇಂದಿಗೂ ಕಾಮಗಾರಿ ಆಮೆ ನಡಿಗೆಯಲ್ಲಿದೆ. ಲೋಯರ್ ಟರ್ಮಿನಲ್ ಪಾಯಿಂಟ್‌ನಲ್ಲಿ (ಎಲ್‌ಟಿಪಿ) ಕಾಮಗಾರಿಗಳನ್ನು ಆರಂಭಿಸಲಾಗಿದೆ. ಎಲ್‌ಟಿಪಿಯಲ್ಲಿ ಯೋಜನೆಗೆ ವಶಪಡಿಸಿಕೊಂಡಿದ್ದ ಜಮೀನಿನ ವಿಚಾರವಾಗಿ ರೈತರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆದು ಸಂಧಾನ ಸಾಧ್ಯವಾಯಿತು.

ರೋಪ್ ವೇಯಿಂದ ಬೆಟ್ಟದ ಜೀವವೈವಿಧ್ಯಕ್ಕೆ ಧಕ್ಕೆ ಬರುತ್ತದೆ ಎಂದು ಆಕ್ಷೇಪಿಸಿ ಪರಿಸರವಾದಿಗಳು ಹೈಕೋರ್ಟ್ ಮೊರೆ ಹೋಗಿದ್ದಾರೆ. ವಿಚಾರಣೆ ನಡೆಯುತ್ತಿದೆ.

ಶರಾವತಿ ಕಣಿವೆಯ ನೋಟ

## ಮುಗಿಯದ 'ಶರಾವತಿ'ಯ ಆತಂಕ

**ರಾಜ್ಯ** ಸರ್ಕಾರವು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಮೂಲಕ ಶರಾವತಿ ಕಣಿವೆಯಲ್ಲಿ 2,000 ಮೆಗಾವ್ಯಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾಗಿರುವುದು ಸ್ಥಳೀಯರು ಹಾಗೂ ನಾಡಿನ ಪರಿಸರಾಸಕ್ತರ ವಿರೋಧಕ್ಕೆ ಕಾರಣವಾಗಿದೆ. ಸದ್ಯ ಈ ಯೋಜನೆಗೆ ರಾಜ್ಯ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ತಜ್ಞರ ಸಮಿತಿ ಕೂಡ ಯೋಜನೆಗೆ ಒಪ್ಪಿಗೆ ನೀಡುವುದು ಬೇಡ ಎಂದು ಶಿಫಾರಸು ಮಾಡಿದೆ.

'ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಅಗತ್ಯವಾದ ಯೋಜನೆ ಇದಾಗಿದ್ದು, ಅತಿ ಕಡಿಮೆ ಪರಿಸರ ಹಾನಿಯೊಂದಿಗೆ ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಗೆ ಹೊಸ ಅಣೆಕಟ್ಟು ನಿರ್ಮಾಣ ಮಾಡುವ ಅಗತ್ಯವಿಲ್ಲ; ಈಗಿರುವ ಗೇರುಸೊಪ್ಪ ಮತ್ತು ತಳಕಳಲೆ ಅಣೆಕಟ್ಟೆಗಳನ್ನು ಬಳಸಿಕೊಳ್ಳಲಾಗುತ್ತದೆ. ಸುರಂಗ ಮೂಲಕ ನೀರನ್ನು ಹರಿಬಿಡುವ ಮತ್ತು ಎತ್ತುವ ವ್ಯವಸ್ಥೆಯಿಂದ ಭೂಮಿಯ ಮೇಲ್ಮೈಗೆ ಯಾವುದೇ ಹಾನಿ ಆಗುವುದಿಲ್ಲ' ಎಂದು ನಿಗಮ ವಾದಿಸುತ್ತಿದೆ.

'ಜಲ ವಿದ್ಯುತ್ ಯೋಜನೆ, ಅಣೆಕಟ್ಟೆಗಳ ನಿರ್ಮಾಣದಿಂದ ಶರಾವತಿ ಕಣಿವೆ ಸೇರಿದಂತೆ ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ಈಗಾಗಲೇ ಸಾಕಷ್ಟು ಬಾಧಿತವಾಗಿದೆ. ಈಗ ಪಂಪ್ಡ್ ಸ್ಟೋರೇಜ್ ಹೆಸರಲ್ಲಿ ಇನ್ನೊಂದು ಯೋಜನೆಯ ಮೂಲಕ ಪರಿಸರಕ್ಕೆ ಹಾನಿ ಮಾಡಲಾಗುತ್ತಿದೆ. ಈ ಪ್ರದೇಶವು ಅಳಿವಿನಂಚಿನಲ್ಲಿರುವ ಸಿಂಗಳೀಕಗಳ ಆವಾಸವಾಗಿದ್ದು, ಅವುಗಳ ನೆಲೆಗೆ ಧಕ್ಕೆಯಾಗಲಿದೆ. ಕಾಮಗಾರಿ ವೇಳೆ ಸ್ಫೋಟಕಗಳ ಬಳಕೆಯಿಂದ ನೀರು, ಮಣ್ಣು ಕಲುಷಿತಗೊಳ್ಳಲಿದೆ. ಭೂ ಕುಸಿತವಾಗಲಿದೆ' ಎಂಬುದು ಪರಿಸರಾಸ್ತಕರ ಆತಂಕ.

## ಗಣಿಗಾಗಿ ಕಾಡು ನಾಶಕ್ಕೆ ವಿರೋಧ

**ಗಣಿಗಾರಿಕೆಗೆ** ಕಾಡು ನಾಶ ಮಾಡಬಾರದು ಮತ್ತು ಸುಸ್ಥಿರ ಗಣಿಗಾರಿಕೆಗಾಗಿ ಈಗಿರುವ ಅದಿರು ಉತ್ಪಾದನಾ ಮಿತಿಯನ್ನು ವಾರ್ಷಿಕ 2 ಕೋಟಿ ಟನ್‌ಗೆ ಮಿತಿಗೊಳಿಸಬೇಕು ಎಂಬ ಕೂಗು ಬಳ್ಳಾರಿ ಜಿಲ್ಲೆಯಲ್ಲಿ ದಿನೇ ದಿನೇ ಪ್ರಬಲಗೊಂಡಿದೆ.

ಕೇಂದ್ರ ಉಕ್ಕು ಸಚಿವಾಲಯದ ಮಾಲೀಕತ್ವದ ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಸಂಡೂರಿನಲ್ಲಿ 'ದೇವದಾರಿ ಗಣಿ' ಎಂಬ ಹೆಸರಿನ 470.4 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಪ್ರಯತ್ನಿಸುತ್ತಲೇ ಇದೆ. ಆದರೆ, ವಿರೋಧ, ಪರವಾನಗಿ ಸಿಗದ ಕಾರಣಕ್ಕೆ ಯೋಜನೆ ಆರಂಭವಾಗಿಲ್ಲ.

ಭಾರತೀಯ ಉಕ್ಕು ಪ್ರಾಧಿಕಾರ ಮಾಲೀಕತ್ವದ ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯೂ ಸಂಡೂರಿನ ರಾಮಗಢ ಅರಣ್ಯ ಬ್ಲಾಕ್‌ನ ಒಟ್ಟು 150 ಎಕರೆ (60.70 ಹೆ.) ಅರಣ್ಯದಲ್ಲಿ 'ರಮಣದುರ್ಗ ಕಬ್ಬಿಣದ ಅದಿರು ಗಣಿ' ಎಂಬ ಹೆಸರಿನಲ್ಲಿ ಗಣಿ ಚಟುವಟಿಕೆ ನಡೆಸಲು ಉದ್ದೇಶಿಸಿದೆ. ಈ ಗಣಿ ಸಿಕ್ಕರೆ ವಿಐಎಸ್‌ಎಲ್ ಪುನಶ್ಚೇತನಗೊಳಿಸುವುದು ಕೇಂದ್ರದ ಇರಾದೆ. ಆದರೆ, ಈ ಗಣಿಗೂ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

## ಆಗುಂಬೆ ಹೃದಯಕ್ಕೇ ರಂಧ್ರ

**ಪಶ್ಚಿಮ** ಘಟ್ಟದ ಮೂಲಕ ಹಾದು ಹೋಗುವ 169 ಎ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಆಗುಂಬೆ ಘಾಟಿಯಲ್ಲಿ ತೀರಾ ಕಿರಿದಾದ ರಸ್ತೆ ಇದೆ. ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ. ಮೇಗರವಳ್ಳಿಯಿಂದ ಆಗುಂಬೆ ನಡುವೆ ಸುಮಾರು 3 ಕಿ.ಮೀ ಉದ್ದದ ರಸ್ತೆಯನ್ನು ದ್ವಿಪಥಗೊಳಿಸುವ ಕಾಮಗಾರಿ ಅರಣ್ಯ ಇಲಾಖೆಯ ಅನುಮತಿ ವಿಳಂಬದ ಕಾರಣದಿಂದಾಗಿ ಇನ್ನೂ ಅನುಷ್ಠಾನವಾಗಿಲ್ಲ. ವಿಸ್ತರಣೆಗೆ ಬಾಕಿ ಇರುವ ಸುಮಾರು 20 ಕಿ.ಮೀ ಉದ್ದದ ರಸ್ತೆಯು ದಟ್ಟ ಕಾನನದೊಳಗೆ ಹಾದುಹೋಗುತ್ತದೆ. ಆಗುಂಬೆ ಮತ್ತು ಹೆಬ್ರಿ ನಡುವೆ ಸುರಂಗ ಮಾರ್ಗ ಹಾಗೂ ಪಾದಚಾರಿ ಮಾರ್ಗವನ್ನು ಒಳಗೊಂಡ ದ್ವಿಪಥ ರಸ್ತೆ ನಿರ್ಮಿಸಲು ಡಿಪಿಆರ್ ತಯಾರಿಸಲು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ₹2.33 ಕೋಟಿ ಮೊತ್ತದ ಟೆಂಡರ್ ಕರೆದಿದೆ.

ಆಗುಂಬೆ ಘಾಟಿಯಲ್ಲಿ ಸುರಂಗ ಕೊರೆದಿದ್ದೇ ಆದರೆ, ಅದು ಭೂಕುಸಿತಕ್ಕೆ ಕಾರಣವಾಗಬಲ್ಲುದು ಎಂಬುದು ಪರಿಸರ ಕಾರ್ಯಕರ್ತರ ಕಳವಳ.

## ಬೃಹತ್ ಯೋಜನೆಗಳ ಭಾರಕ್ಕೆ ನಲುಗಿದ ಉತ್ತರ ಕನ್ನಡ

**ನೌಕಾನೆಲೆ,** ಅಣು ವಿದ್ಯುತ್ ಸ್ಥಾವರ, ಜಲ ವಿದ್ಯುತ್ ಘಟಕಗಳಂತಹ ದೊಡ್ಡ ಯೋಜನೆಗಳಿಂದಾಗಿ ನಲುಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ನದಿ ತಿರುವು, ವಾಣಿಜ್ಯ ಬಂದರು ಸ್ಥಾಪನೆಯ ಬೃಹತ್ ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿರುವುದು ಪರಿಸರವಾದಿಗಳ ಕಣ್ಣು ಕೆಂಪಗಾಗಿಸಿದೆ. ಅವರೊಟ್ಟಿಗೆ ಜಿಲ್ಲೆಯ ಜನರು ಯೋಜನೆ ವಿರುದ್ಧ ನಿರಂತರ ಪ್ರತಿಭಟಿಸುತ್ತಿದ್ದಾರೆ.

**ನದಿ ತಿರುವು:** ಧಾರವಾಡ ಜಿಲ್ಲೆಯಲ್ಲಿ ಹುಟ್ಟಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಬೇಡ್ತಿ ನದಿಯನ್ನು ಹಾವೇರಿ ಮತ್ತು ಗದಗ ಜಿಲ್ಲೆಯ ವ್ಯಾಪ್ತಿಗೆ ನೀರು ಪೂರೈಕೆಗೆ ವರದಾ ನದಿಗೆ ಜೋಡಿಸಲು 'ಬೇಡ್ತಿ-ವರದಾ ನದಿ ಜೋಡಣೆ ಯೋಜನೆ' ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಜನರ ಪ್ರಬಲ ವಿರೋಧದ ನಡುವೆಯೂ ಯೋಜನೆಯ ಪೂರ್ವ ಕಾರ್ಯಸಾಧ್ಯತಾ ವರದಿ ಪುರಸ್ಕರಿಸಿ, ಯೋಜನೆ ಜಾರಿ ಸಲುವಾಗಿ ಡಿಪಿಆರ್ ಸಿದ್ಧಪಡಿಸಲಾಗಿದೆ. ಅಂದಾಜು ₹25,163 ಕೋಟಿ ವೆಚ್ಚದ ಯೋಜನೆ ಇದು. ನದಿ ನೀರು ಸಂಗ್ರಹಕ್ಕೆ ಶಿರಸಿಯ ಸಹಸ್ರಲಿಂಗ ಮತ್ತು ಪಟ್ಟಣದ ಹೊಳೆ ಬಳಿ ಹಾಗೂ ಯಲ್ಲಾಪುರದ ಬೇಡ್ತಿ ಸೇತುವೆ ಸಮೀಪ ಕಿರು ಅಣೆಕಟ್ಟೆ ನಿರ್ಮಾಣ ಮಾಡಿ ಅಲ್ಲಿಂದ 246.58 ಕಿ.ಮೀ ಪೈಪ್‌ಲೈನ್ ಮೂಲಕ ಕೊಂಡೊಯ್ಯುವುದು ಯೋಜನೆಯ ಸ್ವರೂಪ.

'ಬೇಡ್ತಿ ನದಿ ನೀರನ್ನು ಉತ್ತರ ಕನ್ನಡದ ಯಲ್ಲಾಪುರ, ಶಿರಸಿ, ಅಂಕೋಲಾ ತಾಲ್ಲೂಕುಗಳ 1.5 ಲಕ್ಷ ರೈತರು ಕೃಷಿ ಚಟುವಟಿಕೆಗೆ ಅವಲಂಬಿಸಿದ್ದಾರೆ. ಶಿರಸಿ ನಗರ, ಯಲ್ಲಾಪುರ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯೂ ಇದೇ ನದಿಯನ್ನು ಅವಲಂಭಿಸಿದೆ. ಬೇಡ್ತಿಯ ಮುಂದುವರಿದ ಭಾಗವಾಗಿರುವ ಗಂಗಾವಳಿ ನದಿಯ ನೀರನ್ನು, ಕಾರವಾರ ನಗರ, ಅಂಕೋಲಾ ಪಟ್ಟಣ, ಕದಂಬ ನೌಕಾನೆಲೆ, ನೂರಾರು ಹಳ್ಳಿಗಳಿಗೆ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತಿದೆ. ಬೇಸಿಗೆಯ ಆರಂಭದಲ್ಲೇ ಹರಿವು ಕಡಿಮೆಯಾಗುವ ಈ ನದಿಯನ್ನು ತಿರುಗಿಸಿದರೆ ಲಕ್ಷಾಂತರ ಜನರಿಗೆ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗಲಿದೆ' ಎಂಬುದು ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ವಾದ.

**ಅಘನಾಶಿನಿಗೂ ಕಂಟಕ:** ಯಾವುದೇ ಅಣೆಕಟ್ಟೆ ಇಲ್ಲದೆ ನಿರಾತಂಕವಾಗಿ ಹರಿಯುತ್ತಿರುವ ಅಘನಾಶಿನಿ ನದಿಗೂ ನದಿ ತಿರುವು ಯೋಜನೆಯ ಅಪಾಯ ಎದುರಾಗಿದೆ. ಕೇಂದ್ರ ಜಲಶಕ್ತಿ ಇಲಾಖೆ ಮತ್ತು ರಾಜ್ಯ ಜಲಸಂಪನ್ಮೂಲ ಇಲಾಖೆ ಜಂಟಿಯಾಗಿ ಅಂದಾಜು ₹23,000 ಕೋಟಿ ವೆಚ್ಚದಲ್ಲಿ ಅಘನಾಶಿನಿ ನದಿಯನ್ನು ಚಿತ್ರದುರ್ಗ ಜಿಲ್ಲೆಯ ವಾಣಿ ವಿಲಾಸ ಸಾಗರಕ್ಕೆ (ವೇದಾವತಿ ನದಿ) ಜೋಡಿಸುವ ಯೋಜನೆ ಜಾರಿಗೆ ಮುಂದಾಗಿವೆ. 199 ಕಿ.ಮೀ ಉದ್ದದ ಪೈಪ್‌ಲೈನ್ ಮೂಲಕ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಅಂದಾಜು 600 ಎಕರೆ ಅರಣ್ಯ ಭೂಮಿ ಬಳಕೆ ಮಾಡಿಕೊಂಡು ಸಿದ್ದಾಪುರ ತಾಲ್ಲೂಕಿನ ಬಾಳೆಕೊಪ್ಪ ಬಳಿ ಅಣೆಕಟ್ಟೆ ನಿರ್ಮಿಸಿ, ನೀರು ಪಂಪ್ ಮಾಡಿ ಗೋಳಿಮಕ್ಕಿ ಹಾರ್ಸಿಕಟ್ಟಾ, ಸಿದ್ದಾಪುರ, ಸಾಗರ, ಶಿವಮೊಗ್ಗ, ತರೀಕೆರೆ, ಅಜ್ಜಂಪುರ ಮಾರ್ಗವಾಗಿ ವಾಣಿವಿಲಾಸ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆ ಜಾರಿಗೊಳಿಸಲು ಪ್ರಾಥಮಿಕ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗಿದೆ. ಯೋಜನೆಗೆ 1.20 ಲಕ್ಷ ಮರಗಳು ಬಲಿಯಾಗುವ ಸಾಧ್ಯತೆ ಇದೆ.

ಕೇಣಿಯಲ್ಲಿ ಸರ್ವಋತು ಆಳಸಮುದ್ರ ಬಂದರು ಸ್ಥಾಪನೆಯಾಗಲಿರುವ ಪ್ರದೇಶದ ಗ್ರಾಫಿಕ್ ಚಿತ್ರ

**ಬಂದರು ನಿರ್ಮಾಣ:** ಅಂಕೋಲಾದ ಕೇಣಿಯಲ್ಲಿ ಅಂದಾಜು ₹6,515 ಕೋಟಿ ವೆಚ್ಚದ ಬಂದರು ನಿರ್ಮಾಣಕ್ಕೆ ಜೆಎಸ್‌ಡಬ್ಲ್ಯು ಕಂಪನಿಯ ಅಂಗ ಸಂಸ್ಥೆಯಾಗಿರುವ ಕೇಣಿ ಬಂದರು ಪ್ರೈವೆಟ್ ಲಿಮಿಟೆಡ್ (ಕೆಪಿಪಿಎಲ್) ಸಿದ್ಧತೆ ಕೈಗೊಂಡಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಬಂದರು ಯೋಜನೆ ಕೈಗೊಳ್ಳಲು 2022ರಲ್ಲಿ ರಾಜ್ಯ ಸರ್ಕಾರ ಆದೇಶಿಸಿದೆ. 2023ರಲ್ಲಿ ಸರ್ಕಾರದೊಂದಿಗೆ ಕಂಪನಿ ಒಪ್ಪಂದ ಮಾಡಿಕೊಂಡಿದೆ. ಕೇಣಿ ಗ್ರಾಮದ ಕಡಲತೀರದಿಂದ ಅನತಿ ದೂರದಲ್ಲಿ, ಸಮುದ್ರದಲ್ಲೇ 457 ಎಕರೆ ಪ್ರದೇಶದಲ್ಲಿ ಬಂದರು ನಿರ್ಮಿಸುವ ಯೋಜನೆ ಇದು. 309 ಎಕರೆ ಪ್ರದೇಶದಲ್ಲಿ ಸರಕು ಸಂಗ್ರಹಣೆ ಪ್ರದೇಶ, 116 ಎಕರೆಯಲ್ಲಿ ರಸ್ತೆ, ರೈಲು ಮಾರ್ಗ ನಿರ್ಮಾಣ ನಡೆಯಲಿದೆ. ಇಲ್ಲಿಂದ ಅಂಕೋಲಾ ತಾಲ್ಲೂಕಿನ ಬಾಳೆಗುಳಿ ಸಮೀಪ ರಾಷ್ಟ್ರೀಯ ಹೆದ್ದಾರಿ-66ಕ್ಕೆ 4.5 ಕಿ.ಮೀ ಷಟ್ಪಥ ಮಾರ್ಗ, 6.5 ಕಿ.ಮೀ ಉದ್ದದ ರೈಲು ಮಾರ್ಗ ಸ್ಥಾಪನೆ ಯೋಜನೆಯಲ್ಲಿ ಸೇರಿದೆ.

ಆದರೆ, ಯೋಜನೆ ವಿರೋಧಿಸಿ ಪ್ರಬಲ ಹೋರಾಟ ನಡೆದಿದೆ. ಯೋಜನೆಗೆ ಇನ್ನೂ ಅಂತಿಮ ಪರಿಸರ ಅನುಮತಿ ಸಿಕ್ಕಿಲ್ಲ. ಯೋಜನೆ ವಿರುದ್ಧ ಆಗಾಗ ಹೋರಾಟ ನಡೆಯುತ್ತಲೇ ಇದೆ.

Publication Date 21/03/2026

## ❖ ಶರಾವತಿ ಪಂಪ್ ಸ್ಟೋರೇಜ್ ಘಟಕ ವಿವರಣೆ ಕೇಳಿದ ವನ್ಯಜೀವಿ ಮಂಡಳಿ

**ಸಂದರ್ಭ: ಎರಡು ಸಾವಿರ ಮೆಗಾವಾಟ್ ಸಾಮರ್ಥ್ಯದ ಶರಾವತಿ ಪಂಪ್ ಸ್ಟೋರೇಜ್ ಘಟಕದ ಬಗ್ಗೆ ಹೆಚ್ಚುವರಿ ಮಾಹಿತಿ ಹಾಗೂ ವಿವರಣೆ ಒದಗಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿಯು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿದೆ.**

- ಕೇಂದ್ರ ಅರಣ್ಯ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಮಂಡಳಿಯ 89ನೇ ಸಭೆಯಲ್ಲಿ ವನ್ಯಜೀವಿ ಅನುಮೋದನೆಯ ಈ ಪ್ರಸ್ತಾವವನ್ನು ಮುಂದೂಡಲು ತೀರ್ಮಾನಿಸಲಾಯಿತು.
- ಯೋಜನೆಯಿಂದ ವಿದ್ಯುತ್ ಲಭ್ಯತೆಯ ಹೆಚ್ಚಳದ ಬಗ್ಗೆ ವಿವರವಾದ ಸಮರ್ಥನೆಯನ್ನು ರಾಜ್ಯ ಸರ್ಕಾರ ಒದಗಿಸಬೇಕು. ಸಂರಕ್ಷಿತ ಪ್ರದೇಶದ ಹೊರಗೆ ವಿದ್ಯುತ್ ಸಂಗ್ರಹದ ಪರ್ಯಾಯ ತಂತ್ರಜ್ಞಾನಗಳನ್ನು

ಪರಿಶೀಲಿಸಬೇಕು. ಪ್ರಸ್ತಾವದ ಬಗ್ಗೆ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನಿಂದ ಅಭಿಪ್ರಾಯ ಪಡೆದು ಸಲ್ಲಿಸಬೇಕು ಎಂದು ಸ್ಥಾಯಿ ಸಮಿತಿ ಸೂಚಿಸಿದೆ.

- ಪಂಚ್ ಸ್ಟೋರೇಜ್ ಯೋಜನೆಯ ಪ್ರಸ್ತಾವ ಬಗ್ಗೆ, 2025ರ ಜೂನ್ 26ರಂದು ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 84ನೇ ಸಭೆಯಲ್ಲಿ ಚರ್ಚಿಸಲಾಗಿತ್ತು ಷರತ್ತುಗಳನ್ನು ವಿಧಿಸಿ ಯೋಜನೆಗೆ ತಾತ್ವಿಕ ಅನುಮೋದನೆ ನೀಡಲಾಗಿತ್ತು. ಆಗಸ್ಟ್ 19ರಂದು ನಡೆದ ಸ್ಥಾಯಿ ಸಮಿತಿಯ 85ನೇ ಸಭೆಯಲ್ಲಿ ಪ್ರಸ್ತಾವವನ್ನು ಮರು ಪರಿಶೀಲಿಸಲಾಗಿತ್ತು ಪಶ್ಚಿಮ ಘಟ್ಟದಲ್ಲಿ ಜಾರಿಗೊಳ್ಳಲಿರುವ ಈ ಯೋಜನೆ ಬಗ್ಗೆ, ಕೆಲವು ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ರಚಿಸಿ ವರದಿ ಪಡೆದುಕೊಳ್ಳಲು ತೀರ್ಮಾನಿಸಲಾಗಿತ್ತು 'ಯೋಜನೆಯ ಪ್ರಸ್ತಾವವು ತಾಂತ್ರಿಕ ಅರ್ಹತೆ, ಪರಿಸರ ಸುಸ್ಥಿರತೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಹೊಂದಿಲ್ಲ' ಎಂದು ಸಮಿತಿ ಇತ್ತೀಚೆಗೆ ವರದಿ ಸಲ್ಲಿಸಿತ್ತು.

---

# ಐ.ಟಿ ಕಾಯ್ದೆ: ಅಧಿಸೂಚನೆ ಪ್ರಕಟ

## ಏಪ್ರಿಲ್ 1ರಿಂದ ಹೊಸ ಆದಾಯ ತೆರಿಗೆ ಕಾಯ್ದೆಯ ನಿಯಮಗಳು ಜಾರಿ




ನವದೆಹಲಿ (ಪಿಟಿಐ): ಆದಾಯ ತೆರಿಗೆ ಕಾಯ್ದೆ–2026ರ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳ ಅಧಿಸೂಚನೆಯನ್ನು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಶುಕ್ರವಾರ ಪ್ರಕಟಿಸಿದೆ.

ಈ ಹೊಸ ನಿಯಮಗಳು ಏಪ್ರಿಲ್ 1ರಿಂದ ಜಾರಿಗೆ ಬರಲಿವೆ ಎಂದು ಗೆಜೆಟ್ ಅಧಿಸೂಚನೆಯಲ್ಲಿ ತಿಳಿಸಿದೆ.

ಬ್ಯಾಂಕ್‌ಗಳಲ್ಲಿ ನಗದು ಠೇವಣಿ ಮಾಡುವುದು/ ಹಿಂಪಡೆಯುವಿಕೆ, ಮೋಟಾರು ವಾಹನಗಳು ಹಾಗೂ ಆಸ್ತಿ ಖರೀದಿ ಮತ್ತು ಹೋಟೆಲ್ ಬಿಲ್‌ಗಳ ಪಾವತಿಗಾಗಿ ಪ್ಯಾನ್ ಉಲ್ಲೇಖಿಸಿ ನಡೆಸಬಹುದಾದ ವಹಿವಾಟು ಮಿತಿಯನ್ನು ಹೊಸ ಕಾಯ್ದೆಯು ಹೆಚ್ಚಿಸಿದೆ.

ಆರು ದಶಕಗಳಷ್ಟು ಹಳೆಯದಾದ 1961ರ ಆದಾಯ ತೆರಿಗೆ (ಐ.ಟಿ) ಕಾಯ್ದೆಯನ್ನು ಬದಲಿಸಲು, ಸಂಸತ್ತು 2025ರ ಆಗಸ್ಟ್ 12ರಂದು ಹೊಸ ಆದಾಯ ತೆರಿಗೆ ಮಸೂದೆಗೆ ಅಂಗೀಕಾರ ನೀಡಿತ್ತು. ಆಗಸ್ಟ್ 21ರಂದು ರಾಷ್ಟ್ರಪತಿಯವರು ಈ ಮಸೂದೆಗೆ ಅಂಕಿತ ಹಾಕಿದ ಬಳಿಕ ಇದು ಕಾಯ್ದೆಯಾಯಿತು.

ಇದು ಯಾವುದೇ ಹೊಸ ತೆರಿಗೆ ದರವನ್ನು ವಿಧಿಸುವುದಿಲ್ಲ. ಸಂಕೀರ್ಣವಾಗಿರುವ ಹಳೆಯ ಆದಾಯ ತೆರಿಗೆ ಕಾಯ್ದೆಯ ಭಾಷೆಯು, ತೆರಿಗೆದಾರರಿಗೆ ಸರಳವಾಗಿ ಅರ್ಥಮಾಡಿಕೊಳ್ಳುವಂತೆ ಭಾಷೆಯನ್ನು ಸರಳೀಕರಿಸಲಾಗಿದೆ.

ಹಳೆಯ ಕಾಯ್ದೆಯಲ್ಲಿದ್ದ ಅನಗತ್ಯ ನಿಬಂಧನೆಗಳು ಮತ್ತು ಸಂಕೀರ್ಣ ಭಾಷೆಯನ್ನು ಹೊಸ ಕಾಯ್ದೆಯು ತೆಗೆದುಹಾಕಿದೆ. 1961ರ ಆದಾಯ ತೆರಿಗೆ ಕಾಯ್ದೆಯಲ್ಲಿ 819 ಸೆಕ್ಷನ್‌ಗಳಿದ್ದವು. ಅದು ಈಗ 536ಕ್ಕೆ ಇಳಿದಿದೆ. ಅಧ್ಯಾಯಗಳು ಸಹ 47ರಿಂದ 23ಕ್ಕೆ ಇಳಿದಿವೆ. ಹಳೆಯ ಕಾಯ್ದೆಯಲ್ಲಿ 5.12 ಲಕ್ಷ ಪದಗಳಿದ್ದವು. ಅವು ಈಗ 2.6 ಲಕ್ಷಕ್ಕೆ ಕಡಿಮೆ ಆಗಿವೆ. ಕಾಯ್ದೆ ಬಗ್ಗೆ ಹೆಚ್ಚಿನ ಸ್ಪಷ್ಟತೆ ಮೂಡಿಸಲು ಇದೇ ಮೊದಲ ಬಾರಿಗೆ 39 ಹೊಸ ಕೋಷ್ಟಕಗಳು ಮತ್ತು 40 ಹೊಸ ಸೂತ್ರಗಳನ್ನು ಪರಿಚಯಿಸಲಾಗಿದೆ.

ಹೊಸ ನಿಯಮಗಳು ಬಂಡವಾಳ ಗಳಿಕೆ, ಷೇರುಪೇಟೆ ವಿನಿಮಯ ವಹಿವಾಟುಗಳು ಮತ್ತು ಎನ್‌ಆರ್‌ಐಗಳ ತೆರಿಗೆಗೆ ಸಂಬಂಧಿಸಿದಂತೆ ಕಠಿಣ ನಿಯಮಗಳನ್ನು ಹೊಂದಿವೆ.

ಮನೆ ಬಾಡಿಗೆ ಭತ್ಯೆ (ಎಚ್‌ಆರ್‌ಎ) ವಿನಾಯಿತಿ ಲೆಕ್ಕ ಹಾಕುವಾಗ ಪ್ರಸ್ತುತ ಮುಂಬೈ, ದೆಹಲಿ, ಕೋಲ್ಕತ್ತ ಮತ್ತು ಚೆನ್ನೈನಲ್ಲಿ ವೇತನದಾರರು ತಮ್ಮ ಸಂಬಳದ ಶೇ 50ರಷ್ಟು ವಿನಾಯಿತಿ ಪಡೆಯಲು ಅವಕಾಶ ಇದೆ.

ಇದೀಗ ಹೊಸ ನಿಯಮಗಳಡಿ ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಅಹಮದಾಬಾದ್‌ನಲ್ಲಿನ ವೇತನ ಪಡೆಯುವ ಉದ್ಯೋಗಿಗಳಿಗೂ ಸಹ ಈ ಪ್ರಯೋಜನ ದೊರೆಯಲಿದೆ. ಉಳಿದ ಪ್ರದೇಶದಲ್ಲಿನ ವೇತನದಾರರು ಶೇ 40ರಷ್ಟು ಮಿತಿಗೆ ಅರ್ಹರಾಗಿದ್ದಾರೆ.

ಆದಾಯ ತೆರಿಗೆ ಕಡಿತದ ಪ್ರಯೋಜನ ಪಡೆಯಲು ಬಾಡಿಗೆದಾರ-ಭೂಮಾಲೀಕರ ಸಂಬಂಧವನ್ನು ಬಹಿರಂಗಪಡಿಸುವುದು ಕಡ್ಡಾಯವಾಗಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

₹50 ಸಾವಿರ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತ ಜಮೆ ಮಾಡುವಾಗಲೆಲ್ಲ ಪ್ಯಾನ್ ಸಂಖ್ಯೆ ಉಲ್ಲೇಖಿಸುವ ಬದಲು, ವ್ಯಕ್ತಿಯೊಬ್ಬನ ಕಡೆಯಿಂದ ಆಗುವ ವಾರ್ಷಿಕ ಒಟ್ಟು ಜಮೆ ಮೊತ್ತ ಅಥವಾ ಹಣ ಹಿಂಪಡೆಯುವ ಮೊತ್ತವು ₹10 ಲಕ್ಷ ಮೀರಿದ್ದರೆ ಮಾತ್ರ ಪ್ಯಾನ್ ಉಲ್ಲೇಖ ಕಡ್ಡಾಯ ಎಂದು ಹೇಳಲಾಗಿದೆ.

### 'ತೆರಿಗೆ ವಂಚನೆ ಪತ್ತೆಗೆ ತಂತ್ರಜ್ಞಾನ ಬಳಸಿ'

ನವದೆಹಲಿ (ಪಿಟಿಐ): ಉದ್ದೇಶಪೂರ್ವಕವಾಗಿ ತೆರಿಗೆ ವಂಚಿಸುವವರನ್ನು ಪತ್ತೆ ಹಚ್ಚಲು ತಂತ್ರಜ್ಞಾನವನ್ನು ಬಳಸುವಂತೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೂಚನೆ ನೀಡಿದ್ದಾರೆ.

ಆದಾಯ ತೆರಿಗೆ ಕಾಯ್ದೆಯ ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನ ಉದ್ದೇಶಿಸಿ ಮಾತನಾಡಿದ ಅವರು, ಏಪ್ರಿಲ್ 1ರಿಂದ ಹೊಸ ಆದಾಯ ತೆರಿಗೆ ಕಾಯ್ದೆ ಜಾರಿಗೆ ಬರಲಿದೆ. ಭಾರತವನ್ನು ಅತ್ಯಂತ ತೆರಿಗೆ ಸ್ನೇಹಿ ರಾಷ್ಟ್ರವಾಗಿ ಮಾಡಬೇಕಿದೆ ಎಂದು ಹೇಳಿದ್ದಾರೆ.

ಇಲಾಖೆಯು, ಪ್ರಾಮಾಣಿಕ ತೆರಿಗೆದಾರರಿಗೆ ಅನುಕೂಲ ಮಾಡಿಕೊಡಲಿದೆ. ಆದರೆ, ನೀವು ತೆರಿಗೆ ವಂಚನೆ ಮಾಡಿದರೆ, ವ್ಯವಸ್ಥೆಯು ನಿಮ್ಮನ್ನು ಪತ್ತೆ ಹಚ್ಚಲಿದೆ ಎಂದರು.

ಸ್ಥಳೀಯ ಭಾಷೆಗಳಲ್ಲಿ ಹೊಸ ತೆರಿಗೆ ಕಾಯ್ದೆಯ ಬಗ್ಗೆ ಜನರಿಗೆ ಅರಿವು ಮೂಡಿಸಲು ದೇಶದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವಂತೆ ತೆರಿಗೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ.

ಕ್ರಿಪ್ಟೊ ವಿನಿಮಯ ಕೇಂದ್ರಗಳು ತಮ್ಮಲ್ಲಿನ ಕೆಲವು ಮಾಹಿತಿಗಳನ್ನು ತೆರಿಗೆ ಇಲಾಖೆಯ ಜೊತೆ ಹಂಚಿಕೊಳ್ಳುವುದು ಕಡ್ಡಾಯ ಎಂದು ನಿಯಮಗಳಲ್ಲಿ ಹೇಳಲಾಗಿದೆ. ಅಲ್ಲದೆ, ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯು (ಸಿಬಿಡಿಸಿ) ಒಪ್ಪಿತ ಎಲೆಕ್ಟ್ರಾನಿಕ್ ಪಾವತಿ ವಿಧಾನಗಳಲ್ಲಿ ಒಂದು ಎಂದು ಹೇಳಿದೆ.

ದ್ವಿಚಕ್ರ ವಾಹನ ಸೇರಿದಂತೆ ₹5 ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಯಾವುದೇ ಮೋಟಾರು ವಾಹನ ಖರೀದಿಸುವಾಗ ಪ್ಯಾನ್ ಉಲ್ಲೇಖಿಸುವುದು ಕಡ್ಡಾಯ ಆಗುತ್ತದೆ.

ಹೋಟೆಲ್ ಅಥವಾ ರೆಸ್ಟೋರೆಂಟ್ ಬಿಲ್ ಮೊತ್ತ, ಸಭಾಭವನಗಳಿಗೆ ಅಥವಾ ಬ್ಯಾಂಕ್ವೆಟ್ ಹಾಲ್‌ಗಳಿಗೆ ಅಥವಾ ಕಾರ್ಯಕ್ರಮ ನಿರ್ವಹಣೆ ಮಾಡುವ ವ್ಯಕ್ತಿಗೆ ಮಾಡುವ ಪಾವತಿ ಮೊತ್ತ ₹1 ಲಕ್ಷಕ್ಕಿಂತ ಹೆಚ್ಚಿದ್ದರೆ ಪ್ಯಾನ್ ಸಂಖ್ಯೆ ನಮೂದು ಕಡ್ಡಾಯ ಆಗಲಿದೆ.

ಈಗಿರುವ ನಿಯಮಗಳ ಪ್ರಕಾರ ಹೋಟೆಲ್ ಅಥವಾ ರೆಸ್ಟೋರೆಂಟ್ ಶುಲ್ಕವು ₹50 ಸಾವಿರಕ್ಕಿಂತ ಹೆಚ್ಚಿದ್ದರೆ ಪ್ಯಾನ್ ಸಂಖ್ಯೆ ಉಲ್ಲೇಖಿಸಬೇಕಾಗುತ್ತದೆ.

Publication Date
21/03/2026

Presented by

---

## ❖ ಒಡಿಶಾದಲ್ಲಿ 2028ರ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

**ಸಂದರ್ಭ: ಭಾರತವು 2028ರ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಲಿದೆ. ಭುವನೇಶ್ವರದಲ್ಲಿ ಈ ಪ್ರತಿಷ್ಠಿತ ಕೂಟ ನಡೆಯಲಿದೆ ಎಂದು ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದ್ದಾರೆ.**

- '2028ರ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಚಾಂಪಿಯನ್‌ಷಿಪ್ ಅನ್ನು ಒಡಿಶಾ ಆಯೋಜಿಸುತ್ತಿದೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ಈ ಕೂಟದ ಮೂಲಕ ಒಡಿಶಾ ರಾಜ್ಯದ ಕ್ರೀಡಾಪ್ರೇಮವನ್ನು ಜಗತ್ತು ವೀಕ್ಷಿಸಲಿದೆ' ಎಂದು ಮಾಝಿ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

- 'ವಿಶ್ವದಾದ್ಯಂತ ಇರುವ ಕ್ರೀಡಾ ಪಟುಗಳು ಮತ್ತು ಅಭಿಮಾನಿಗಳನ್ನು ಸ್ವಾಗತಿಸಲು ಹಾಗೂ ಆತಿಥ್ಯ ನೀಡಲು ಒಡಿಶಾ ರಾಜ್ಯವು ಎದುರು ನೋಡುತ್ತಿದೆ ಎಂದ ಅವರು, ದೇಶ ದಲ್ಲಿ ಕ್ರೀಡಾ ವ್ಯವಸ್ಥೆಯನ್ನು ಬಲಪಡಿಸು ವಲ್ಲಿ ನಿರಂತರ ಮಾರ್ಗದರ್ಶನ ಮತ್ತು ಬೆಂಬಲ ನೀಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.
- ಭಾರತದಲ್ಲಿ ಮೊದಲ ಸಲ ಚಾಂಪಿಯನ್‌ಷಿಪ್‌ನ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು 2028ರ ಮಾರ್ಚ್ 3 ರಿಂದ 5ರವರೆಗೆ ಆಯೋಜನೆಯಾಗಲಿವೆ. ಮೂರು ದಿನಗಳಲ್ಲಿ ಪುರುಷರು ಮತ್ತು ಮಹಿಳೆಯರಿಗೆ ತಲಾ 13ರಂತೆ ಒಟ್ಟು 26 ಸ್ಪರ್ಧೆಗಳನ್ನು ಒಳಗೊಂಡಿರುತ್ತವೆ.

-----------------------------------------ಶುಭವಂದನೆಗಳು-----------------------------------------

Dr. Rajkumar IAS/KAS Academy

